# ಕರ್ನಾಟಕ ವಿಕಾಸ

# Karnataka Vikas

ಮಾರ್ಚ್
March 2016




ದಿನಾಂಕ 3-2-2016ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ನವದೆಹಲಿಯಲ್ಲಿ ನಡೆದ ಕುಡಿಯುವ ನೀರು ಮತ್ತು ನೈರ್ಮಲ್ಯ ಕುರಿತು ಪರಿಶೀಲನಾ ಸಭೆಯಲ್ಲಿ ಭಾಗವಹಿಸಿರುವುದು.




ದಿನಾಂಕ 2-2-2016ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ಕುಮಾರಿ ಎನ್. ಮಂಜುಶ್ರೀ, ಭಾ.ಆ.ಸೇ. ಹಿಂದಿನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಚಿತ್ರದುರ್ಗ ಜಿಲ್ಲಾ ಪಂಚಾಯತ್‌ರವರು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರಿಂದ ಪ್ರಶಸ್ತಿ ಪಡೆಯುತ್ತಿರುವುದು.








ದಿನಾಂಕ 6–2–2016ರಂದು ಚಿತ್ರದುರ್ಗ ಜಿಲ್ಲಾ ಪಂಚಾಯತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ರಾಜ್ಯದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಒಂದು ದಿನದ ಕಾರ್ಯಾಗಾರವನ್ನು ಸರ್ಕಾರದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಮಾರ್ಚ್ 2016 | ಸಂಪುಟ : 57 | Volume : 57

March 2016 | ಸಂಚಿಕೆ : 04 | Issue : 04

## ಈ ಸಂಚಿಕೆಯೊಳಗೆ


| | | |
|---|---|---|
| 5. | ವಿಶೇಷ ವರದಿ | – ಭಾ. ಭೀ ಪತ್ತಾರ |
| 16. | ವರದಿ | – ಸಂಪಾದಕರು. (ಕ.ವಿ.)<br>– ನಾಗೇಂದ್ರ ಕುಮಾರ್.ಜೆ.ಟಿ<br>– ನಾಗರತ್ನ ಭಟ್ |
| 19. | ಲೇಖನ | – ತುಳಜಾರಾಂ ಸೋ. ಪವಾರ್<br>– ನಾಗರಾಜ ಆರ್. ಎಚ್.<br>– ಎಲ್.ಎಸ್. ದಿನೇಶ |
| 28. | ಚಿಂತನೆ | – ಪ್ರೊ. ಎ.ಎಚ್. ಮಾಸಾಪತಿ |
| 32. | ಯಶೋಗಾಥೆ | – ಎನ್. ಉಮಾದೇವಿ<br>– ಡಾ. ಎ. ಚನ್ನಪ್ಪ |
| 39. | ಕವಿಯಕ್ಷಪ್ರಶ್ನೆ | – ಎಂ. ಸಿದ್ದರಾಜು |
| 40. | ಕಾವ್ಯ ವಿಕಾಸ | – ರಾಮಚಂದ್ರ ರೆಡ್ಡಿ |
| 41. | ಪಂಚತಂತ್ರ ವರದಿ | |
| 42. | ಸಕಾಲ ವರದಿ | |
| 43. | ಸುತ್ತೋಲೆ | |





ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ. ರಾಜ್ )
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

**ವೈ. ಮಹಾಂಕಾಳಪ್ಪ**
ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು
**ಡಾ. ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**

### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ವಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಛೇರಿ ವಿಳಾಸ


ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857
www.rdpr.kar.nic.in
Email : kvrdpr@gmail.com

### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಫೆಬ್ರವರಿ 2016ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಹೆಚ್.ಆರ್.ಶ್ರೀಶರವರ 'ಹಳ್ಳಿಗಳಿಗೆ ಕೊನೆಗೂ ಬಂತು ಸ್ವರಾಜ್ಯ' ಲೇಖನವು ಗಾಂಧೀಜಿಯವರು ಕಂಡ ಹಳ್ಳಿಗಳ ಉದ್ಧಾರಕ್ಕೆ ಗ್ರಾಮ ಪಂಚಾಯತಿ ಕಾಯ್ದೆ ಸಮಗ್ರ ತಿದ್ದುಪಡಿ ತಂದದ್ದು ಅತ್ಯಂತ ಸೂಕ್ತವಾದುದು. ಮನುಷ್ಯರ ಕೈಗಳಿಗೆ ಇಂದು ಕೆಲಸವೇ ಇಲ್ಲ. ಯಂತ್ರಗಳೇ ಸಿಂಹಪಾಲು ಬಾಚಿಕೊಂಡಿವೆ. ಗ್ರಾಮೀಣ ಪ್ರದೇಶಗಳ ಜನ ಪಟ್ಟಣದತ್ತ ಐಷಾರಾಮಿ ಜೀವನಕ್ಕೆ ವಲಸೆ ಹೋಗುತ್ತಿರುವುದು ಖೇದದ ಸಂಗತಿ. ವಿಶೇಷ ಲೇಖನ ಕಣ್ಣು ತೆರೆಸುವಂತಿದೆ. ಸಕಾಲ ವರದಿ, ಸುತ್ತೋಲೆ, ಕೆಲ ಸ್ಥಿರ ಶೀರ್ಷಿಕೆಗಳು ಪ್ರಯೋಜನಕಾರಿಗಳಾಗಿವೆ.

**ಶ್ರೀ ಕೊತ್ತಲ ಮಹದೇವಪ್ಪ**
ಲೇಖಕ, ವಿನಾಯಕನಗರ, ಲಕ್ಷ್ಮೇಶ್ವರ, ಗದಗ 582116

ಫೆಬ್ರವರಿ 2016 ಕರ್ನಾಟಕ ವಿಕಾಸ ಸಂಚಿಕೆಯಲ್ಲಿ ಶ್ರೀ ಹೆಚ್.ಆರ್.ಶ್ರೀಶ ಅವರು ಬರೆದ 'ಹಳ್ಳಿಗಳಿಗೆ ಕೊನೆಗೂ ಬಂತು ಸ್ವರಾಜ್ಯ' ಲೇಖನ ಉತ್ತಮವಾಗಿ, ಅರ್ಥಪೂರ್ಣವಾಗಿ, ಯೋಗ್ಯವಾಗಿ ಮೂಡಿಬಂದಿದೆ. ಸರಕಾರಗಳು ಇಂದು ಸ್ಥಳೀಯ (ಗ್ರಾಮೀಣ)ರಿಗೆ ಸಂಪೂರ್ಣ ಅಧಿಕಾರ ನೀಡುವ ಬೃಹತ್ ಕಾರ್ಯಗಳನ್ನು ಹಮ್ಮಿಕೊಂಡು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡುತ್ತಿವೆ. ಗ್ರಾಮ ಸ್ವರಾಜ್ಯ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸಾಗಿತ್ತು. ಅದನ್ನು ಇಂದು ನನಸು ಮಾಡಬೇಕಾಗಿದೆ. ಗ್ರಾಮೀಣ ಮೂಲಭೂತ ಅವಶ್ಯಕತೆಗಳಾದ ನೀರು, ಚರಂಡಿ, ರಸ್ತೆ, ಶೌಚಾಲಯ ಇತ್ಯಾದಿಗಳನ್ನು ಅಭಿವೃದ್ಧಿ ಮಾಡಬೇಕಾಗಿದೆ. ಸ್ಥಳೀಯ ಗ್ರಾಮೀಣ ಜನರೇ ಇದಕ್ಕೆ ಟೊಂಕ ಕಟ್ಟಿ ನಿಂತು ಕೆಲಸವನ್ನು ಮಾಡಬೇಕಾಗಿದೆ. ಲೇಖನವು ಗ್ರಾಮೀಣ ಅಭಿವೃದ್ಧಿಯ ಸಂಪೂರ್ಣ ಚಿತ್ರಣ ನೀಡಿದೆ.

**ಶ್ರೀ ಸಂತೋಷ. ಶಾಮರಾವ ಆಚಾರ್ಯ,**
ಅಂಚೆ ದುಬಲಗುಂಡಿ, ಹುಮನಾಬಾದ ತಾಲೂಕು,
ಬೀದರ 585418.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದ ಹೊರಬರುತ್ತಿರುವ ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರತಿ ಮಾಹೆಯು ಉತ್ತಮವಾದ ಲೇಖನಗಳು, ಯಶೋಗಾಥೆಗಳು ಪ್ರಕಟವಾಗುತ್ತಿದ್ದು, ಗ್ರಾಮೀಣ ಭಾಗದ ಜನರಿಗೆ ಬಹಳ ಉಪಯುಕ್ತವಾಗಿದೆ. ಫೆಬ್ರವರಿ 2016ರ ಪತ್ರಿಕೆಯಲ್ಲಿ ಶ್ರೀ ಸುಬ್ಬರಾಜ ಅರಸ್ ವಿ.ಆರ್ ಇವರ ಅಭಿವೃದ್ಧಿ ಅಧಿಕಾರಿಗಳ ಅಂಗಳದಲ್ಲಿ 'ಹಾಲೇನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಶೌಚಾಲಯಕ್ಕಾಗಿ ಕುಮಾರಿ ಲಾವಣ್ಯಳ ಹೋರಾಟ' ಎಂಬ ಲೇಖನವು ವಿದ್ಯಾರ್ಥಿಗಳಿಗೆ ಮಾದರಿಯಾಗಿದೆ. ಇಲಾಖೆಯ ಸಚಿವರು ಹೊಸ ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿರುವುದು ಬಹಳ ಸಂತೋಷಕರವಾದ ವಿಷಯವಾಗಿದೆ.

**ಶ್ರೀ ಹೆಚ್.ಬಿ.ರಾಮಕೃಷ್ಣಯ್ಯ,**
ನಿವೃತ್ತ ಮುಖ್ಯೋಪಾಧ್ಯಾಯರು, ನಂ.176, ವಿನಾಯಕ ನಗರ,
ಸೊಂಡೆಕೊಪ್ಪ ಮುಖ್ಯರಸ್ತೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ.

ವಿಶೇಷ ವರದಿ

# ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015 (2015 ರ ಕರ್ನಾಟಕ ಅಧಿನಿಯಮ ಸಂಖ್ಯೆ 44)

ಭಾ. ಭೀ ಪತ್ತಾರ

(ಈ ಅಧಿನಿಯಮವನ್ನು ಅಧಿಸೂಚನೆ ಸಂಖ್ಯೆ: ಗ್ರಾಅಪ 09 ಗ್ರಾಪಂಅ 2016 ದಿನಾಂಕ: 23-02-2016ರ ಮೂಲಕ ದಿನಾಂಕ: 25-02-2016 ರಂದು ಜಾರಿಗೆ ತರಲಾಗಿದೆ)

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ವಿಧೇಯಕ ತಿದ್ದುಪಡಿಯ ಪ್ರಮುಖ ಅಂಶಗಳು

## ತಿದ್ದುಪಡಿಯ ಪ್ರಮುಖ ಅಂಶಗಳು

1. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಕಾಯ್ದೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಎಂಬುದಾಗಿ ಪುನರ್ ನಾಮಕರಣ.
2. ಪೀಠಿಕೆ (Preamble)
3. ಜನವಸತಿ ಸಭೆಯ ಕಲ್ಪನೆಗೆ ಶಾಸನಾತ್ಮಕ ರೂಪ – ಸೇರ್ಪಡೆ.
4. ಪಂಚಾಯತ್ ನೀತಿಯ ನಿರ್ದೇಶನಾ ತತ್ವಗಳು (Directive principles of Panchyat Policy)
5. ಪಂಚಾಯಿತಿ ಸದಸ್ಯರ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು – ಸೇರ್ಪಡೆ.
6. ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಸಹಾಯಕ ಸಚಿವರ ಸ್ಥಾನಮಾನ – ಸೇರ್ಪಡೆ.
7. ಪಂಚಾಯತ್ ಒಂಬಡ್ಸ್‌ಮನ್ ಬದಲಾಗಿ ಕುಂದುಕೊರತೆ ನಿವಾರಣಾ ಪ್ರಾಧಿಕಾರ (Grievances Redressal Authority) ಸ್ಥಾಪನೆ
8. ಭ್ರಷ್ಟಾಚಾರ ನಿಷೇಧ ಕ್ರಮಗಳ ಪರಿಣಾಮಕಾರಿ ಅನುಷ್ಠಾನ.
9. ಕಡ್ಡಾಯ ಮತದಾನ (Compulsory Voting)
10. ಎಲ್ಲರನ್ನೂ ನಿರಾಕರಿಸುವ ಮತಾಧಿಕಾರ (None of The Above (NOTA))

} ಅಧಿನಿಯಮ 2015ರ ಸಂಖ್ಯೆ 17 ರಲ್ಲಿ ಸೇರಿಸಲಾಗಿದೆ.

11. ತೆರಿಗೆ ಸುಧಾರಣೆ ಮತ್ತು ಸಂಪನ್ಮೂಲ ಕ್ರೋಢೀಕರಣ.
12. ಸಾಮುದಾಯಿಕ ಗುಂಪುಗಳಿಗೆ ಕರಾರು ಒಪ್ಪಂದದ ಅನುಕೂಲತೆ – ಸೇರ್ಪಡೆ.
13. ಕೆಳ ಹಂತದಿಂದ ಯೋಜನೆಗಳ ಮೇಲ್ಮುಖ ಪಯಣ
14. ಅಭಿವೃದ್ಧಿಯ ಕಲ್ಪನೆಯ ಸಾಕಾರ – ಮುಕ್ತ ಅನುದಾನ
15. ಪಂಚಾಯತ್ ರಾಜ್ ಆಯುಕ್ತಾಲಯ ಸ್ಥಾಪನೆ– ಸೇರ್ಪಡೆ.

ಸರ್ಕಾರದ ವಿಶೇಷ ಕಾರ್ಯದರ್ಶಿ (ನಿ) ಮತ್ತು ಕಾನೂನು ಸಲಹೆಗಾರರು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.



16. ಪಂಚಾಯತಿಗಳಿಗೆ ಸಾಮಾಜಿಕ ಹೊಣೆಗಾರಿಕೆಗಳಿಗೆ ಶಾಸನಾತ್ಮಕ ಸ್ಪರ್ಶ, ಅಂದರೆ
   ಅ) ಅಸ್ಪೃಶ್ಯತೆ ನಿಯಂತ್ರಣ ಕ್ರಮಗಳು
   ಬ) ಆತ್ಮಹತ್ಯೆ ತಡೆಗೆ ವಿಶ್ವಾಸ ಕುದುರಿಸುವ ಪ್ರಯತ್ನಗಳು
   ಕ) ಮಹಿಳೆಯರ ಲೈಂಗಿಕ ಕಿರುಕುಳ ತಡೆಗೆ ಕ್ರಮಗಳು
17. ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ
18. ತಂತ್ರಜ್ಞಾನದ ಅವಿಷ್ಕಾರಗಳ ಫಲ
19. ಜನರ ಪಾಲ್ಗೊಳ್ಳುವಿಕೆಯ ಮೂಲಕ ಅಧಿಕಾರ ವಿಕೇಂದ್ರಿಕರಣ
20. ಶುದ್ಧ ಕುಡಿಯುವ ನೀರು, ನೈರ್ಮಲ್ಯ ವ್ಯವಸ್ಥೆಗೆ ಆದ್ಯತೆ
21. ಸಹಕಾರಿ ಸಂಸ್ಥೆಗಳ ಸ್ಥಾಪನೆಗೆ ಉತ್ತೇಜನ
22. ಸಾಮಾಜಿಕ ನ್ಯಾಯದ ಸಂರಕ್ಷಣೆಯ ಕ್ರಮಗಳು

## ಪೀಠಿಕೆ

ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015ರ ಐತಿಹಾಸಿಕ ತಿದ್ದುಪಡಿಯನ್ನು ಅಂಗೀಕರಿಸುವುದರ ಮೂಲಕ ತ್ರಿಸ್ಥರ ಪಂಚಾಯತಿ ವ್ಯವಸ್ಥೆಯ ಅಂಗಗಳಾದ ಜನವಸತಿ ಸಭೆ, ವಾರ್ಡ್‌ಸಭೆ ಮತ್ತು ಗ್ರಾಮ ಸಭೆಗಳ ಮೂಲಕ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳನ್ನು ಪೂರ್ಣ ಪ್ರಜಾಪ್ರಭುತ್ವದ ತಳಹದಿಯ ಮೇಲೆ ರೂಪಿಸುವ ಉದ್ದೇಶ ಸಾಕಾರಗೊಂಡಿದೆ.

❖ **ಸ್ವಯಂ ಆಡಳಿತ ತತ್ವ ಜಾರಿಗೆ ತರಲು ಮತ್ತು ಜನರ ದನಿ, ನೀತಿ ರಚನೆ ಕಾರ್ಯದಲ್ಲಿ ನೇರವಾಗಿ ಪಾಲ್ಗೊಳ್ಳುವಿಕೆಗೆ ಆಸ್ಪದ ಕಲ್ಪಿಸಲು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುಗಳೇ ಆಗಿರುವ ಜನರೇ ಆಡಳಿತದಲ್ಲಿ ಪ್ರತಿಧ್ವನಿಸುವಂತೆ ಮಾಡುವುದಕ್ಕೆ ಅವಕಾಶ ಕಲ್ಪಿಸಿ, ಆ ಮೂಲಕ ಮಹಾತ್ಮಾ ಗಾಂಧೀಜಿಯವರ ಕನಸಿನ ಗ್ರಾಮಸ್ವರಾಜ್ಯ ಸ್ಥಾಪನೆಯ ಸಾಕಾರಕ್ಕಾಗಿ ಅಧಿನಿಯಮದ ಶೀರ್ಷಿಕೆಗೆ ಮರು ನಾಮಕರಣ ಮಾಡಲಾಗಿದ್ದು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಎಂದು ಹೆಸರಿಸಲಾಗಿದೆ.**

- ಇದು ಧ್ವನಿ ಇಲ್ಲದವರಿಗೆ ಧ್ವನಿಯಾಗಲಿದೆ, ತುಳಿತಕ್ಕೊಳಗಾದ ಮತ್ತು ಹಿಂದುಳಿದ ವರ್ಗಗಳ ಜನರ ಆಶೋತ್ತರಗಳಿಗೆ ಸ್ಪಂದಿಸಲು ಅನುಕೂಲವಾಗುವ ಜನವಸತಿ ಸಭೆಯ ಕಲ್ಪನೆಯ ಅನುಷ್ಠಾನ ಇದರಿಂದ ಸಾಧ್ಯವಾಗಲಿದೆ. ಇದು ಕರ್ನಾಟಕದಲ್ಲಿಯೇ ಮೊದಲು. ಗ್ರಾಮಸಭೆ ಸಭೆ ಸೇರುವ ಮುನ್ನ ಈ ಜನವಸತಿ ಸಭೆಗಳ ಅಭಿಪ್ರಾಯ ಸಂಗ್ರಹ ಮತ್ತು ಮನ್ನಣೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ.

- ಗ್ರಾಮಸ್ಥರನ್ನು ಅಧಿಕಾರಯುತರನ್ನಾಗಿ ಮಾಡುವುದರ ಮೂಲಕ ಪ್ರಜಾಪ್ರಭುತ್ವದಲ್ಲಿ "ಪ್ರಜೆಗಳೇ ಪ್ರಭುಗಳು" ಎಂಬ ಸದಾಶಯವನ್ನು ಕಾರ್ಯಗತಗೊಳಿಸಲು ಇದು ಮೊದಲ ಹೆಜ್ಜೆಯಾಗಿದೆ. ಕೆಳಹಂತದಿಂದ ಮೇಲ್ಮಟ್ಟಕ್ಕೆ ಗ್ರಾಮೀಣ ಯೋಜನೆಗಳ ರೂಪುಗೊಳಿಸುವಿಕೆಯ ಪರಿಕಲ್ಪನೆಯ ಜಾರಿ, ಜನವಸತಿ ಸಭೆಯಿಂದ ವಾರ್ಡ್ ಸಭೆಗೆ ವಾರ್ಡ್ ಸಭೆಯಿಂದ ಗ್ರಾಮ ಸಭೆಗೆ ಯೋಜನೆಗಳ ಮೇಲ್ಮುಖ ಪಯಣ. ಅಲ್ಲಿಂದ ಯೋಜನೆಗಳ ಅನುಮೋದನೆ-ಅನುಷ್ಠಾನಕ್ಕೆ ಅಗತ್ಯ ಪಥದತ್ತ ಸಾಗುವಿಕೆ.
- ಗ್ರಾಮೀಣ ಯೋಜನೆಗಳ ಅನುಷ್ಠಾನ ಫಲಪ್ರದವಾಗಲು ರಾಜ್ಯ ಹಣಕಾಸು ಆಯೋಗ ಶಿಫಾರಸ್ಸು ಮಾಡುವ ಅನುದಾನದಲ್ಲಿ ಪ್ರತಿಶತ 20 ರಷ್ಟು ಅನುದಾನವನ್ನು ಮುಕ್ತ ಅನುದಾನವಾಗಿ ಬಳಕೆ ಮಾಡಿಕೊಳ್ಳಲು ಗ್ರಾಮ ಪಂಚಾಯತಿಗಳಿಗೆ ಅವಕಾಶ ನೀಡುವ ಅಧಿಕಾರ. ಇದು ರಾಷ್ಟ್ರದಲ್ಲಿಯೇ ಪ್ರಥಮ. ಗ್ರಾಮೀಣ ಪ್ರದೇಶದ ನೈಜ ಅಗತ್ಯಗಳನ್ನು ಪೂರೈಸುವ ಯೋಜನೆಗಳ ಅನುಷ್ಠಾನದ ದಾರಿಯಲ್ಲಿ ಹಣಕಾಸು ಅಡಚಣೆ ಉಂಟಾಗಬಾರದೆಂಬ ಕ್ರಾಂತಿಕಾರಿ ಕಲ್ಪನೆಯ ಜಾರಿಯ ದಿಸೆಯಲ್ಲಿ ಇದು ಒಂದು ಪ್ರಯತ್ನ.
- ಗ್ರಾಮೀಣ ಬದುಕಿನ ನೈಜ ಅಗತ್ಯತೆಗಳನ್ನು ಪರಿಗಣಿಸುವ ವ್ಯವಸ್ಥೆ ಜಾರಿಗೆ ತರಲು ಈ ಅಧಿನಿಯಮ ಒಂದು ಬಹುದೊಡ್ಡ ಸಾಧನೆ.
- ಇತ್ತೀಚೆಗೆ ರೈತರ ಆತ್ಮಹತ್ಯೆಗಳಂಥ ಕ್ರಮ ತಡೆಯಲು, ರೈತರಲ್ಲಿ ಆತ್ಮವಿಶ್ವಾಸ ಕುದುರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.
- ಪೀಠಿಕೆ ಮತ್ತು ಪಂಚಾಯತಿ ನೀತಿಯ ನಿರ್ದೇಶನಾ ತತ್ವಗಳ ಸೇರ್ಪಡೆ ಗ್ರಾಮೀಣ ಸ್ವಯಂ ಆಡಳಿತ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸಬಲಗೊಳಿಸುವ ನಿಟ್ಟಿನಲ್ಲಿ ಶಾಸನಾತ್ಮಕ ಅಧಿಕಾರ ಒದಗಿಸುವ ಕ್ರಾಂತಿಕಾರಿ ಹೆಜ್ಜೆಯನ್ನು ಇರಿಸಲಾಗಿದೆ.
- ಗ್ರಾಮೀಣ ಕರ್ನಾಟಕದ ಜೀವನ ಮಟ್ಟವನ್ನು ಸುಧಾರಿಸಲು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ಮಹಿಳಾ ಸಬಲೀಕರಣ, ಲಿಂಗಸಮಾನತೆ ಕಾಪಾಡಲು, ಆರ್ಥಿಕ ಅಭ್ಯುದಯ ತನ್ಮೂಲಕ ಸಾಮಾಜಿಕ ಸಮಾನತೆಯ ಪ್ರಬಲ ಉಪಕರಣಗಳಾಗಲು ಸ್ವಯಂ ಆಡಳಿತ ಸಂಸ್ಥೆಗಳನ್ನು ಸಜ್ಜುಗೊಳಿಸುವ ದಿಸೆಯಲ್ಲಿ ದಿಟ್ಟ ಹೆಜ್ಜೆ.
- ಸಾಮಾಜಿಕವಾಗಿ ಸೌಲಭ್ಯವಂಚಿತ ಹಾಗೂ ಅಭಿವೃದ್ಧಿ ಕಡೆಗಣಿತ ವರ್ಗಗಳಿಗೆ ಸಮಾನ ಅಭಿವೃದ್ಧಿಯನ್ನು ತರುವ ಮೂಲಕ ಗ್ರಾಮೀಣ ಬದುಕಿನಲ್ಲಿರುವ ಅಸಮತೋಲನವನ್ನು ಸಮತೋಲನಗೊಳಿಸಿ ಮೂಲಕ ಸೃಜನಶೀಲ, ಸ್ವಾವಲಂಬಿ, ಸಂಪದ್ಭರಿತ, ಹೆಮ್ಮೆಯ, ಸುಖಿ, ಸಮಾಜದ ಮತ್ತು ಸೌಹಾರ್ದಯುತ ವಾತಾವರಣ ಹೊಂದಿದ ಗ್ರಾಮೀಣ ಪರಿಸರವನ್ನು ರೂಪುಗೊಳಿಸುವ ಪ್ರಯತ್ನದಲ್ಲಿ ಸದುದ್ದೇಶದ ಹೆಜ್ಜೆಗಳು.
- ಅಸ್ಪೃಶ್ಯತೆಯ ನಿಯಂತ್ರಣ ಕ್ರಮಗಳು, ಮಹಿಳೆಯರ ಲೈಂಗಿಂಕ ಕಿರುಕುಳದ ತಡೆಗೆ ಕ್ರಮಗಳನ್ನು ತೆಗೆದುಕೊಳ್ಳುವ ಜವಾಬ್ದಾರಿ ಪಂಚಾಯತಿಗಳಿಗೆ ನೀಡಲಾಗಿದೆ.
- ವೃದ್ಧಿತ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ. ಗ್ರಾಮೀಣ ಜನರ ಬದುಕುಗಳಲ್ಲಿ ಪರ್ಯಾಯ ಆದಾಯ ಮೂಲ ಸೃಷ್ಠಿಸುವ ಪ್ರಯತ್ನಗಳಿಗೆ ಇಂಬು. ಕನಿಷ್ಠ ಮೂಲಭೂತ ಸೌಕರ್ಯಗಳಿಂದ ಹಿಡಿದು ಉತ್ತಮ ಗುಣಮಟ್ಟದ ಜನಜೀವನಕ್ಕೆ ಅವಕಾಶ ಕಲ್ಪಿಸುವ ಸಮರ್ಥ ಸೌಲಭ್ಯಗಳ ಸೃಷ್ಠಿಯತ್ತ ದೂರದೃಷ್ಠಿಯ ನೋಟ.
- ಮಹಾತ್ಮ ಗಾಂಧೀಜಿಯವರ ಕನಸಿನ ಗ್ರಾಮೀಣ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳ ಸದೃಡಗೊಳಿಸುವಿಕೆಯ ಮೂಲಕ ಅಭಿವೃದ್ಧಿಯ ಚಿಂತನ-

ಮಂಥನ, ಜನರ ಪಾಲ್ಗೊಳ್ಳುವಿಕೆಯ ಪ್ರಕ್ರಿಯೆಯ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಅಧಿಕಾರ ವಿಕೇಂದ್ರಿಕರಣದ ನೇರ ಫಲದ ವರ್ಗಾವಣೆ.

❖ **ಪಂಚಾಯತಿ ನೀತಿಯ ನಿರ್ದೇಶಕ ತತ್ವಗಳ ಸೇರ್ಪಡೆ ಮತ್ತು ಅನುಷ್ಠಾನ:**

- ಭಾರತ ಸಂವಿಧಾನದಲ್ಲಿ ಅಡಕವಾಗಿರುವ ನಿರ್ದೇಶಕ ತತ್ವಗಳ ಮಾದರಿಯಲ್ಲಿ ಪಂಚಾಯತಿಯಲ್ಲಿಯೂ ಸಹ ಪಂಚಾಯತಿಯ ನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸುವ ಪ್ರಯತ್ನ ರಾಷ್ಟ್ರದಲ್ಲಿಯೇ ಮೊದಲನೆಯದು. ಸ್ಥಳೀಯ ಸಂಸ್ಥೆಗಳನ್ನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವಾಗಿಸುವತ್ತ ನ್ಯಾಯಾಂಗದ ಕಾರ್ಯನಿರ್ವಹಣೆಯ ಅವಕಾಶವನ್ನು ಹೊಂದಿರಬೇಕೆಂಬ ಪ್ರಯತ್ನದಲ್ಲಿ ಒಂದು ಮುಂದಡಿ. ಗ್ರಾಮೀಣ ಬದುಕಿನಲ್ಲಿ ಸ್ವಾವಲಂಬನೆ, ಪರಸ್ಪರ ಗೌರವ–ಘನತೆ ಕಾಪಾಡುವ ಮತ್ತು ಸಮಾನತೆಯನ್ನು ಸುನಿಶ್ಚಿತಗೊಳಿಸುವ ಪಾರದರ್ಶಕ ವ್ಯವಸ್ಥೆಯನ್ನು ಪಾಲ್ಗೊಳ್ಳುವಿಕೆಯ ಮೂಲಭೂತ ತಳಹದಿಯ ಮೇಲೆ ಅನುಷ್ಠಾನಕ್ಕಾಗಿ ಅಧ್ಯಾಯ 1–ಎ ಯನ್ನು ಸೇರಿಸಲಾಗಿದೆ. ಆ ಪಂಚಾಯತಿ ನೀತಿ ನಿರ್ದೇಶಕ ತತ್ವಗಳು ಈ ಕೆಳಕಂಡಂತಿವೆ ಅಂದರೆ;

1. ಎಲ್ಲರಿಗೂ ಶುದ್ಧ ಕುಡಿಯುವ ನೀರು, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮ ಸಮುದಾಯದ ಜೀವನಮಟ್ಟವನ್ನು ಮತ್ತು ಬದುಕಿನ ಗುಣಮಟ್ಟವನ್ನು ಸುಧಾರಿಸುವುದು;
2. ಅಗತ್ಯ ಗ್ರಾಮೀಣ ಮೂಲ ಸೌಲಭ್ಯಗಳನ್ನು ಒದಗಿಸುವುದು ಮತ್ತು ಗ್ರಾಮೀಣ ಸಮುದಾಯಗಳು ಮತ್ತು ಸಂಘಟನೆಗಳನ್ನು ತನ್ನ ಸುಧಾರಣೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು;
3. ತನ್ನ ನಿವಾಸಿಗಳ ಆರ್ಥಿಕ, ಸಾಮಾಜಿಕ ಮತ್ತು ಪರಿಸರಾತ್ಮಕ ಗುಣಮಟ್ಟವನ್ನು ವೃದ್ಧಿಸುವುದಕ್ಕಾಗಿ ಆಸ್ತಿಗಳ ನಿರ್ವಹಣೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಪಂಚಾಯತಿ ಪ್ರದೇಶದಲ್ಲಿ ಪ್ರಜಾಸತ್ತಾತ್ಮಕ ಪ್ರಾತಿನಿಧ್ಯ, ಸಾಮಾಜಿಕ ಸಮ್ಮಿಳನ ಮತ್ತು ಅರ್ಥಪೂರ್ಣ ಸಮುದಾಯವನ್ನು ತೊಡಗಿಸಿಕೊಳ್ಳುವುದು;
4. ಪಂಚಾಯತ್ ಅಧೀನದಲ್ಲಿರುವ ಸಂಪನ್ಮೂಲಗಳನ್ನು ಬಳಕೆ ಮಾಡಿಕೊಂಡು ಪಂಚಾಯತಿ ಪ್ರದೇಶದ ಅರಣ್ಯ ಮತ್ತು ವನ್ಯಜೀವಿಗಳನ್ನು ಸುಸ್ಥಿರ ಅಭಿವೃದ್ಧಿಗೆ ಸಮರ್ಪಕವಾಗಿ ಮುಂದಿನ ಪೀಳಿಗೆಗಾಗಿ ಅವುಗಳನ್ನು ಸಂರಕ್ಷಿಸುವ ಸಮರ್ಥನೀಯ ವಿಧಾನವನ್ನು ಅನುಸರಿಸುವುದು;
5. ಸ್ಥಳೀಯ ಸಮುದಾಯದ ಕಲೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ರಕ್ಷಿಸುವುದು ಮತ್ತು ಕಾಪಾಡುವುದು ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನವನ್ನು ನೀಡುವುದು;
6. ನವಣೆ, ಸಜ್ಜೆ, ಬಿಳಿ ಜೋಳ, ಸಾಮೆ, ಸಾವೆ, ಕೊರ್ಲಿ ಇತ್ಯಾದಿ ಮತ್ತು ಔಷಧೀಯ ಮೌಲ್ಯವುಳ್ಳ ಗಿಡಮೂಲಿಕೆಗಳಂಥ ದೇಸಿ ವೈವಿಧ್ಯತೆಯುಳ್ಳ ಬೀಜಗಳನ್ನು ಸಂರಕ್ಷಿಸುವುದು, ಅಭಿವೃದ್ಧಿ ಪಡಿಸುವುದು ಮತ್ತು ಹಂಚಿಕೆ ಮಾಡುವುದು;
7. ಕೃಷಿ ಕೈಗಾರಿಕಾ ಕೇಂದ್ರಗಳು, ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಉತ್ತೇಜಿಸುವ ಮೂಲಕ ಉದ್ಯೋಗಗಳನ್ನು ಸೃಜಿಸುವುದು ಮತ್ತು ವ್ಯವಹಾರ ಕಾರ್ಯಾಚರಣೆಗಳನ್ನು ಸುಗಮಗೊಳಿಸುವುದಕ್ಕಾಗಿ ದಸ್ತಾವೇಜುಗಳನ್ನು ಸ್ವೀಕರಿಸುವ ಏಕ ಗವಾಕ್ಷಿ ವ್ಯವಸ್ಥೆ ಮಾಡುವುದು;
8. ರಾಷ್ಟ್ರೀಯ ಮತ್ತು ರಾಜ್ಯ ಕಾರ್ಯನೀತಿಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸಲು ಸಮರ್ಥಗೊಳಿಸುವುದಕ್ಕಾಗಿ ಬೇರುಮಟ್ಟದಲ್ಲಿ ಸಹಕಾರಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಮೂಲಕ ಸಹಕಾರಿ ಮನೋಭಾವ ಮತ್ತು ವಾತಾವರಣವನ್ನು ನಿರ್ಮಿಸುವುದು;

9. ಗ್ರಾಮೀಣ ಪ್ರದೇಶಗಳಲ್ಲಿ ಜನರ ಕೌಶಲ್ಯ, ಜ್ಞಾನ ಮತ್ತು ಇತರ ಸಾಮರ್ಥ್ಯಗಳಿಗೆ ಅನುಗುಣವಾಗಿ ಗ್ರಾಮೀಣ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಬಲೀಕರಣಗೊಳಿಸುವುದು;

10. ಶಾಂತಿಯುತ ಸಮಾಜ ಮತ್ತು ಕೋಮು ಸೌಹಾರ್ದವನ್ನು ಸಂರಕ್ಷಿಸುವ ಹಾಗೂ ಎಲ್ಲಾ ರೀತಿಯ ಹಿಂಸೆಗಳನ್ನು ತಡೆಗಟ್ಟುವ ಸುರಕ್ಷಿತ ಮತ್ತು ಸಹನಶೀಲ ಸಮುದಾಯವನ್ನು ಪೋಷಿಸುವುದು.

- ಕುಂದುಕೊರತೆ ನಿವಾರಣೆಗೆ ಸ್ಪಂದನಶೀಲ ಕಾರ್ಯವಿಧಾನ ಕಲ್ಪಿಸುವ ಮೂಲಕ ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಗೆ ಮೈಲಿಗಲ್ಲು ಸ್ಥಾಪನೆ.
- ಗ್ರಾಮಗಳಲ್ಲಿ ಶೋಷಣೆ ಮುಕ್ತ, ಭಯಮುಕ್ತ, ವ್ಯಾಜ್ಯಮುಕ್ತ, ಬಯಲು ಬಹಿರ್ದೆಸೆಮುಕ್ತ ಪರಿಸರಗಳನ್ನಾಗಿ ರೂಪಿಸುವ ನಿಟ್ಟಿನಲ್ಲಿ ಎಲ್ಲರಿಗೂ ಶುದ್ಧ ಕುಡಿಯುವ ನೀರು ಮತ್ತು ವೈಯಕ್ತಿಕ ಶೌಚಾಲಯಗಳ ಒದಗಿಸುವುದರ ಮೂಲಕ ಗ್ರಾಮ ನೈರ್ಮಲೀಕರಣ ಸೌಲಭ್ಯಗಳನ್ನು ನೀಡಿ ಸಾಮುದಾಯಿಕ ಜೀವನ ಮಟ್ಟದ ಸುಧಾರಣೆ ತನ್ಮೂಲಕ ಬದುಕಿನ ಗುಣಮಟ್ಟದ ಉನ್ನತೀಕರಣ.
- ಶುದ್ಧ ಕುಡಿಯುವ ನೀರು, ಶೌಚಾಲಯ, ನೈರ್ಮಲ್ಯ ಮತ್ತು ಆರೋಗ್ಯ ವ್ಯವಸ್ಥೆಯನ್ನು ಆದ್ಯತಾ ವಲಯವೆಂದು ಪರಿಗಣಿಸಿ ಆ ಸೌಲಭ್ಯಗಳನ್ನು ಒದಗಿಸಲು ಶಾಸನಾತ್ಮಕ ಅಧಿಕಾರವನ್ನು ಪ್ರತ್ಯಾಯೋಜಿಸುವ ಮೊದಲ ಪ್ರಯತ್ನ.
  - ಗ್ರಾಮೀಣ ಆಡಳಿತವನ್ನು ಸ್ಪಂದನಶೀಲ, ಪ್ರತಿಕ್ರಿಯಾತ್ಮಕ ಮತ್ತು ಪಾರದರ್ಶಕ ವ್ಯವಸ್ಥೆಯ ಮೂಲಕ ಸುಸ್ಥಿರಗೊಳಿಸಲು ಕ್ರಮಗಳು. ಫಲಾನುಭವಿಗಳೇ ಕಾಮಗಾರಿಗಳನ್ನು ನಿರ್ವಹಿಸಲು ಅವಕಾಶ ಒದಗಿಸುವ ಸಾಮುದಾಯಿಕ ಗುತ್ತಿಗೆ ವ್ಯವಸ್ಥೆ. ಕಾಲಮಿತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಪೂರ್ಣಗೊಳಿಸುವಿಕೆ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಆದಾಯದ ಮೂಲ ವಿಸ್ತರಿಸುವ ಕ್ರಮಗಳಿಗೆ ನಾಂದಿ.
- ಗ್ರಾಮೀಣ ಪರಿಸರದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಹಣಕಾಸಿನ ಋಣಭಾರ, ಬಡತನ ಅಥವಾ ಇತರೇ ಕಾರಣಗಳಿಗಾಗಿ ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ಕೈಗೊಳ್ಳುವ ಮಾನಸಿಕ ಸ್ಥಿತಿಯಿಂದ ರೈತರು ಮತ್ತು ಇತರರು ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಒತ್ತಡಕ್ಕೆ ಸಿಲುಕಿ ನಾಜೂಕಾದ ಪರಿಸ್ಥಿತಿ ಎದುರಿಸುತ್ತಿರುವ ಸಂದರ್ಭದಲ್ಲಿ ಸೂಕ್ತವಾದಂತಹ ಆತ್ಮವಿಶ್ವಾಸ ಮತ್ತು ಧೈರ್ಯ ತುಂಬುವ ವಾತಾವರಣ ನಿರ್ಮಾಣ ಮಾಡುವ ಪ್ರಯತ್ನದಲ್ಲಿ ಶಾಸನಾತ್ಮಕ ನೆರವು.
- ಗ್ರಾಮೀಣ ಕ್ರೀಡೆಗಳನ್ನು ಹಾಗೂ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮತ್ತು ಪೋಷಿಸುವ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು ನೀಡುವ ಮತ್ತು ಪರಂಪರಾಗತ ಸ್ಮಾರಕಗಳನ್ನು ರಕ್ಷಿಸುವ ಪ್ರಯತ್ನಗಳಿಗೆ ಬೆಂಬಲಿಸುವುದಕ್ಕಾಗಿ ಪ್ರಯತ್ನ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.
- ದೇಶಿಯ ವೈವಿಧ್ಯತೆಯುಳ್ಳ ಬೀಜಗಳ ತಳಿಗಳನ್ನು ಸಂರಕ್ಷಿಸಲು, ಅಭಿವೃದ್ಧಿಪಡಿಸಲು ಮತ್ತು ಹಂಚಿಕೆ ಮಾಡುವ ಸಲುವಾಗಿ ಇದರಲ್ಲಿ ಔಷಧೀಯ ಮೌಲ್ಯಗಳುಳ್ಳ ಗಿಡಮೂಲಿಕೆಗಳಂತಹ ವೈವಿಧ್ಯಮಯ ಸಸ್ಯ ಸಂಕುಲವನ್ನು ಬೆಳೆಸಲು ನವಣೆ, ಸಜ್ಜೆ, ಬಿಳಿಜೋಳ, ಸಾವೆ, ಕೊರ್ಲೆ ಮುಂತಾದ ಕಾಳು–ಕಡಿಗಳನ್ನು ಅಭಿವೃದ್ಧಿಪಡಿಸುವುದು.
- ಕೃಷಿ ಆಧಾರಿತ ಕೈಗಾರಿಕೆಗಳ ಮತ್ತು ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಉತ್ತೇಜಿಸುವ ಸಲುವಾಗಿ ಪಂಚಾಯತಿಗಳು ತನ್ನ ವ್ಯಾಪ್ತಿಯ ನಾಗರೀಕರ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುವಲ್ಲಿ ಮುಂಚೂಣಿ ಕಾರ್ಯಾಲಯದ ಪಾತ್ರ ವಹಿಸುವಂತೆ ಮತ್ತು ನಾಗರೀಕರ ಬೇಕು–ಬೇಡಗಳಿಗೆ

ಸ್ಪಂದಿಸಲು ಆಡಳಿತದ ವಿವಿಧ ಇಲಾಖೆಗಳ ನಡುವೆ ಸಂಪರ್ಕದ ಕೊಂಡಿಯಾಗಿ ಕಾರ್ಯನಿರ್ವಹಿಸುವ ಅವಕಾಶ ಗ್ರಾಮ ಪಂಚಾಯತಿಗೆ ಒದಗಿಸಲಾಗಿದೆ.

- ಬೇರುಮಟ್ಟದಲ್ಲಿ ಸಹಕಾರಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಸಹಕಾರಿ ಮನೋಭಾವ ಮತ್ತು ವಾತಾವರಣ ನಿರ್ಮಿಸಲು ಪ್ರಯತ್ನ.
- ಹೊಸ-ಹೊಸ ತಂತ್ರಜ್ಞಾನದ ಅವಿಷ್ಕಾರಗಳಿಗೆ ಗ್ರಾಮೀಣ ಪರಿಸರವನ್ನು ಸಹಾ ಒಳಗೊಳ್ಳುವಂತೆ ಮಾಡಲು ಗ್ರಾಮೀಣ ಭಾಗದಲ್ಲಿ ಜ್ಞಾನ ನಿರ್ವಹಣೆ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ.
- ಸುರಕ್ಷಿತ, ಶಾಂತಿಯುತ, ಸಹನಶೀಲ, ಕೋಮು ಸೌಹಾರ್ದವನ್ನು ಪೋಷಿಸುವ ಸಾಮಾಜಿಕ ವ್ಯವಸ್ಥೆ ರೂಪುಗೊಳಿಸುವ ಅಧಿಕಾರ ಪಂಚಾಯತಿಗಳಿಗೆ ಪ್ರಾಪ್ತವಾಗಿದೆ. ಪಂಚಾಯತಿ ಪ್ರದೇಶದ ಅರಣ್ಯ ಮತ್ತು ವನ್ಯ ಜೀವಿಗಳನ್ನು ಸಂರಕ್ಷಿಸುವ ವಿಧಾನಗಳನ್ನು ವ್ಯಾಖ್ಯಾನಿಸಲಾಗಿದೆ.
- ಗ್ರಾಮೀಣ ಮಾನವ ಸಂಪನ್ಮೂಲ ಅಭಿವೃದ್ಧಿಯತ್ತ ಆದ್ಯ ಗಮನ ಹರಿಸಲಾಗಿದೆ. ಸಬಲ, ಕೌಶಲ್ಯಯುತ ವೈಯಕ್ತಿಕ ಸಾಮರ್ಥ್ಯಗಳ ನಿರ್ಮಾಣಕ್ಕೆ ಒತ್ತು ನೀಡಲಾಗಿದ್ದು, ಇದೊಂದು ಶಾಸನಾತ್ಮಕ ಅವಕಾಶ.

### ❖ ಗ್ರಾಮ ಸ್ವರಾಜ್ ಘಟಕಗಳು:

- ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮಸಭೆಗಳು ಗ್ರಾಮ ಪಂಚಾಯತಿಯ ಗ್ರಾಮ ಸ್ವರಾಜ್ ಘಟಕಗಳೆಂದು ನಾಮಕರಣ ಮಾಡಿ ಈ ಸಭೆಗಳು ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ಅಧಿನಿಯಮದಲ್ಲೇ ಸ್ಪಷ್ಟಪಡಿಸಲಾಗಿದೆ.

### ❖ ಜನವಸತಿ ಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳು:

- ಜನವಸತಿ ಸಭೆಗೆ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗೆ ನೆರವು ನೀಡುವ ಕರ್ತವ್ಯವನ್ನು ಪ್ರತ್ಯಾಯೋಜಿಸಲಾಗಿದೆ.
- ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳನ್ನು ಗುರುತಿಸುವ, ನೀರು ಪೂರೈಕೆ, ಬೀದಿ ದೀಪ ಮುಂತಾದ ಮೂಲಭೂತ ಜವಾಬ್ದಾರಿಗಳನ್ನು ವಹಿಸಲಾಗಿದೆ.
- ಒಟ್ಟು 21 ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳನ್ನು ಪಟ್ಟಿ ಮಾಡಿ ಅವುಗಳ ಜವಾಬ್ದಾರಿಯನ್ನು ವಹಿಸಲಾಗಿದೆ.
- ನಗರಪ್ರದೇಶ ಮತ್ತು ಗ್ರಾಮೀಣ ಪ್ರದೇಶದ ಯೋಜಿತ ಅಭಿವೃದ್ಧಿ ಪದ್ದತಿ ಅಥವಾ ವ್ಯವಸ್ಥೆಯಲ್ಲಿ ಇದ್ದ ಕಂದರವನ್ನು ಮುಚ್ಚಿ ಗ್ರಾಮಗಳ ಅಭಿವೃದ್ಧಿಗಾಗಿ ಪಟ್ಟಣ ಮತ್ತು ನಗರ ಯೋಜನಾ ಪದ್ದತಿಯನ್ನು ಗ್ರಾಮಗಳಿಗೂ ವಿಸ್ತರಿಸುವ ಕ್ರಮಕ್ಕೆ ಇದೇ ಮೊದಲ ಬಾರಿ ಕೈ ಹಾಕಲಾಗಿದೆ.
- ಯೋಜಿತ ಅಭಿವೃದ್ಧಿಯ ಪರಿಣಾಮಕಾರಿ ಹೆಜ್ಜೆಗಳನ್ನು ಸ್ಪಷ್ಟವಾಗಿ ಗುರುತಿಸಿ, ಅಭಿವೃದ್ಧಿಯ ನಿಯಮಗಳನ್ನು ಪಾಲಿಸಲು ಕಟ್ಟುನಿಟ್ಟಾದ ಅವಕಾಶವನ್ನು ಅಧಿನಿಯಮದಲ್ಲಿಯೇ ನೀಡಲಾಗಿದೆ.
- ಜನವಸತಿ ನಿವಾಸಿಯ ಸಾರ್ವಜನಿಕ ಹಿತ ಅಥವಾ ಆರೋಗ್ಯ ಮತ್ತು ಸುರಕ್ಷತೆಗೆ ಹಾನಿಯಾಗುವ ಯಾವುದೇ ಇತರ ಚಟುವಟಿಕೆಯನ್ನು ನಿಯಂತ್ರಿಸುವುದಕ್ಕೆ ಗ್ರಾಮ ಪಂಚಾಯತಿಗೆ ನೆರವು ನೀಡುವ ಅವಕಾಶವನ್ನು ಜನವಸತಿ ಸಭೆಗೆ ನೀಡಿ, ಮೂಲ ಜನವಸತಿ ನಿವಾಸಿಗೆ ಪ್ರಾಮುಖ್ಯತೆ ನೀಡಿ ಕ್ರಾಂತಿಕಾರಕ ಹೆಜ್ಜೆ ಇಡುವಲ್ಲಿ ಕರ್ನಾಟಕ ಮೈಲಿಗಲ್ಲನ್ನು ಸಾಧಿಸಿದೆ.
- ಜನವಸತಿ ಪ್ರದೇಶದಲ್ಲಿ ಸಾರ್ವಜನಿಕ ಆರೋಗ್ಯ ರಕ್ಷಣೆ, ಸ್ವಚ್ಛತೆ ಕಾಪಾಡುವುದು, ಪರಿಸರ ಸಂರಕ್ಷಣೆ ಸಾರ್ವಜನಿಕ ಉಪದ್ರವ ನಿಯಂತ್ರಣ, ಮಾಲಿನ್ಯ ನಿಯಂತ್ರಣ, ಸಾರ್ವಜನಿಕ ಶಾಂತಿ ಇವುಗಳ ಬಗ್ಗೆ ಅರಿವು ಮೂಡಿಸುವುದು. ಜಲ ಸಂರಕ್ಷಣೆ, ನೈಸರ್ಗಿಕ ಸಸ್ಯ ಸಂಕುಲದ ಸಂರಕ್ಷಣೆ, ವಯಸ್ಕರ ಶಿಕ್ಷಣ

ಕಾರ್ಯಕ್ರಮಗಳಿಗೆ ಉತ್ತೇಜನ, ಸಾಕ್ಷರತೆ ಮತ್ತು ಶಿಕ್ಷಣ ಮಟ್ಟಗಳನ್ನು ಹೆಚ್ಚಿಸುವುದಕ್ಕೆ ಹಾಗೂ ಕೌಟುಂಬಿಕ ಸಮಾಲೋಚನೆಗೆ ವ್ಯವಸ್ಥೆ ಮಾಡುವುದಕ್ಕೆ, ದುಶ್ಚಟಗಳಿಂದ ದೂರವಿದ್ದು ಸದ್ಗುಣ ಬೆಳೆಸಿಕೊಳ್ಳುವುದಕ್ಕೆ, ಮಾದಕ ದ್ರವ್ಯಗಳ ಸೇವನೆಯನ್ನು ತ್ಯಜಿಸುವಂತೆ ಪ್ರೇರೇಪಿಸುವುದರ ಮೂಲಕ ಚಾರಿತ್ರ್ಯ ನಿರ್ಮಾಣದ ಸದಾಶಯಗಳನ್ನು ಸಾಕಾರಗೊಳಿಸುವ ಮಹತ್ತರವಾದ ಕರ್ತವ್ಯಗಳನ್ನು ಜನವಸತಿ ಸಭೆಗೆ ನೀಡಲಾಗಿದೆ.

- ಜನವಸತಿ ಪ್ರದೇಶದಲ್ಲಿರುವ ಸಾರ್ವಜನಿಕ ಆಸ್ತಿ–ಪಾಸ್ತಿಗಳನ್ನು ಸಂರಕ್ಷಿಸುವ ಮತ್ತು ನಿರ್ವಹಿಸುವ ಮಹತ್ತರ ಜವಾಬ್ದಾರಿಯನ್ನು ಒದಗಿಸಲಾಗಿದೆ.
- ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆ ನಿವಾರಣೆ, ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಮತ್ತಿತರ ಸಮಸ್ಯೆಗಳಿಗೆ
- ಪರಿಹಾರ ಒದಗಿಸುವ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಈ ಜನವಸತಿ ಸಭೆಗಳಿಗೆ ನೀಡಲಾಗಿದೆ.
- ತಿದ್ದುಪಡಿಗಳ ಮೂಲಕ ಗ್ರಾಮೀಣ ಜನರನ್ನು ಅಧಿಕಾರಯುಕ್ತರನ್ನಾಗಿ ಮಾಡಿ ಧ್ವನಿಯಿಲ್ಲದ ಸಣ್ಣ–ಸಣ್ಣ ಜನವಸತಿಗಳ ನಿವಾಸಿಗಳಿಗೂ ಸಹಾ ಅಧಿಕಾರಯುಕ್ತರನ್ನಾಗಿ ಮಾಡಲಾಗಿದೆ. ಜನವಸತಿ ಸಭೆಯ ಮೂಲಕ ಹೊಸ ಪ್ರಯೋಗ ಮಾಡಿ ಮೂಲಕ ಹೆಚ್ಚಿನ ಧ್ವನಿ ಒದಗಿಸುವ ಪ್ರಯತ್ನಗಳನ್ನು ಬಲಗೊಳಿಸುವ ಉದ್ದೇಶ ಈಡೇರಿಸುವ ಶ್ರೇಷ್ಠ ಕಾನೂನು ಅಸ್ತ್ರವಾಗಿ ಈ ತಿದ್ದುಪಡಿ ಪರಿಣಮಿಸಿದೆ.

### ❖ ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು – ಸೇರ್ಪಡೆ

(ಎ) ಪಂಚಾಯಿತಿಯ ಪ್ರತಿಯೊಂದು ವರ್ಗ ಮತ್ತು ಸ್ಥಳೀಯ ಮತದಾನ ಕ್ಷೇತ್ರಗಳ ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವುದು;

(ಬಿ) ಪಂಚಾಯಿತಿಯ ನಿವಾಸಿಯು ಮಾಡಿದ ವಿಚಾರಣೆಗಳಿಗೆ ಮತ್ತು ಮನವಿಗಳಿಗೆ ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ಪ್ರತಿಕ್ರಿಯಿಸುವುದು;

(ಸಿ) ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸುವ ಮೂಲಕ ಸಮುದಾಯ ಮುಂದಾಳತ್ವವನ್ನು ಕಲ್ಪಿಸುವುದು;

(ಡಿ) ನಡತೆ ಮತ್ತು ನೈತಿಕತೆಯ ಗರಿಷ್ಟ ಗುಣಮಟ್ಟವನ್ನು ನಿರ್ವಹಿಸುವುದು;

(ಇ) ಸಾರ್ವಜನಿಕ ಹಿತಾಸಕ್ತಿಯಲ್ಲಿ ಮಾತ್ರವೇ ಸೇವೆ ಮಾಡುವುದು ಮತ್ತು ಯಾವುದೇ ವ್ಯಕ್ತಿಯ ಅನುಕೂಲ ಅಥವಾ ಅನಾನುಕೂಲವನ್ನು ಪ್ರದಾನ ಮಾಡುವಲ್ಲಿ ಬೇಧಭಾವ ತೋರಿಸಬಾರದು;

(ಎಫ್) ಯಾವುದೇ ವ್ಯಕ್ತಿಯ ವಿರುದ್ಧ ಬೇಧಭಾವ ತೋರದೇ ಸಮಾನತೆಯನ್ನು ಪ್ರೋತ್ಸಾಹಿಸುವುದು ಮತ್ತು ಅವರ ಮತ, ವಯಸ್ಸು, ಧರ್ಮ, ಲಿಂಗ ಅಥವಾ ಅಸಮರ್ಥತೆಯನ್ನು ಪರಿಗಣಿಸದೆ) (Regardless) ಅವರನ್ನು ಗೌರವದಿಂದ ಕಾಣುವುದು;

(ಜಿ) ಜನರಿಗೆ ಅವರು ಅರ್ಹನಾಗಿರುವ ಮಾಹಿತಿಯನ್ನು ಪಡೆಯುವುದಕ್ಕೆ ಅವಕಾಶವನ್ನು ಕಲ್ಪಿಸುವುದು;

(ಎಚ್) ಯಾವುದೇ ವಿಷಯದಲ್ಲಿ ಆತನು ಹಣಕಾಸಿನ (Pecuniary) ಆಸಕ್ತಿಯನ್ನು ಹೊಂದಿರುವಾಗ ಆತನನ್ನು ಯಾವುದೇ ಚರ್ಚೆ ಅಥವಾ ಮತದಾನದಲ್ಲಿ ಭಾಗವಹಿಸುವುದರಿಂದ ಅಂಥ ವಿಷಯದ ಪರಿಗಣನೆಯಲ್ಲಿ ಸಭೆಯಿಂದ ಹಿಂತೆಗೆದುಕೊಳ್ಳುವಲ್ಲಿ ಸ್ವಯಂ ನಿಯಂತ್ರಣ ಹೊಂದುವುದು;

(ಐ) ಆದ್ಯತೆಗಳು ಮತ್ತು ಗುರಿಗಳನ್ನು ಸಾಧಿಸುವಲ್ಲಿ ಪಂಚಾಯತ್‌ನ ಕಾರ್ಯ ನಿರ್ವಹಣೆಯನ್ನು ಪರಿಶೀಲಿಸುವುದು.

(ಜೆ) ಸರ್ಕಾರವು ಮಾಡಿದ ಆದ್ಯತೆಗಳನ್ನು ನಿರ್ವಹಿಸುವುದು ಮತ್ತು ಸ್ಥಳೀಯ ಸಂದರ್ಭದಲ್ಲಿ ಆ ಆದ್ಯತೆಗಳನ್ನು ಎಷ್ಟು ಅತ್ಯುತ್ತಮವಾಗಿ ನೀಡಬಹುದು ಎಂಬುದನ್ನು ತೀರ್ಮಾನಿಸುವುದು;

(ಕೆ) ಪ್ರದೇಶದ ಉತ್ತಮ ಆಡಳಿತದಲ್ಲಿ ಭಾಗವಹಿಸುವುದು ಮತ್ತು ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಪಂಚಾಯಿತಿ ನಿವಾಸಿಗಳ ಪಾಲ್ಗೊಳ್ಳುವಿಕೆಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸುವುದು.

(ಎಲ್) ಈ ಮೊದಲು ಜನರಿಂದ ಆಯ್ಕೆಯಾದ ನಂತರ ಜನ ಪ್ರತಿನಿಧಿಗಳ (ಪಂಚಾಯಿತಿ ಮಟ್ಟದ) ಕರ್ತವ್ಯಗಳನ್ನು ಮತ್ತು ಜವಾಬ್ದಾರಿಯನ್ನು ಶಾಸನಾತ್ಮವಾಗಿ ನೀಡಿರಲಿಲ್ಲ. ಇದರಿಂದ ಜನರಿಗೆ ನೇರವಾಗಿ ಆಡಳಿತದಲ್ಲಿ ಭಾಗಿಯಾಗುವ ಅವಕಾಶ ನೀಡಲಾಗಿದೆ. ಇದೊಂದು ಅತ್ಯಂತ ನೇರ ಮತ್ತು ದೂರದೃಷ್ಟಿಯ ಕ್ರಮ.

- **ಪಾರದರ್ಶಕತೆ ಆಯಾಮಗಳು :**
  - ಗ್ರಾಮೀಣ ಕುಂದುಕೊರತೆ ನಿವಾರಣೆಗೆ ಸ್ಪಂದನಶೀಲ ಕಾರ್ಯವಿಧಾನ ಕಲ್ಪಿಸುವ ವ್ಯವಸ್ಥೆ ರೂಪಿಸಲಾಗಿದೆ.
  - ಕುಂದುಕೊರತೆ ನಿವಾರಣೆಗೆ ಅರ್ಜಿಯೊಂದು ಸಲ್ಲಿಕೆಯಾದಾಗ ಆ ಅರ್ಜಿಯ ಮೇಲೆ ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಅನುಪಾಲನ ಕ್ರಮಗಳ ವರದಿಯನ್ನು ನೀಡುವುದನ್ನು ಕಡ್ಡಾಯಗೊಳಿಸುವ ಮೂಲಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪಾರದರ್ಶಕಗೊಳಿಸಲಾಗಿದೆ.
  - ಅಧಿನಿಯಮದ 296ಐ ಪ್ರಕರಣವನ್ನು ಸೇರಿಸಿ 296ಐ(3) ಪ್ರಕಾರ ಈ ಕೆಳಕಂಡಂತೆ ವರದಿ ಸಲ್ಲಿಸಲು ಅಂತಹ ವರದಿಯನ್ನು ಆಯಾ ಪಂಚಾಯಿತಿಯ ಅಂತರ್ಜಾಲದಲ್ಲಿ ಪ್ರಕಟಿಸಲು ಕ್ರಮ ಕೈಗೊಂಡು ಪಾರದರ್ಶಕತೆಯನ್ನು ಜಾರಿಗೆ ತರಲಾಗಿದೆ.
  - ಪ್ರತಿಯೊಂದು ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ತನ್ನ ಜಾಲತಾಣದಲ್ಲಿ ಪ್ರತಿ ತಿಂಗಳ 15ನೇ ದಿನಗೊಳಗಾಗಿ ಅಥವಾ ನಿಯಮಿಸಬಹುದಾದ ಅಂಥ ಅಂತರಗಳಲ್ಲಿ, ಅದರಲ್ಲಿ ಹೇಳಲಾದ ವರದಿಯಲ್ಲಿ ;–
  - (ಎ) ಸ್ವೀಕರಿಸಲಾದ ದೂರುಗಳ ಸಂಖ್ಯೆಯನ್ನು (ಬಿ) ಬಾಕಿ ಇರುವ ದೂರುಗಳ ಸಂಖ್ಯೆಯನ್ನು
    (ಸಿ) ವಿಲೆಯಾದ ದೂರುಗಳ ಸಂಖ್ಯೆಯನ್ನು (ಡಿ) ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು, – ಪ್ರಕಟಿಸತಕ್ಕದ್ದು."

- ಪಂಚಾಯಿತಿ ಸದಸ್ಯರು ತಮ್ಮ ಆಸ್ತಿ ಮತ್ತು ಹೊಣೆಗಾರಿಕೆಯನ್ನು ಆಯ್ಕೆಯಾದ ನಂತರ ಘೋಷಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

- ಹೀಗೆ ಘೋಷಿಸಲ್ಪಡುವ ಆಸ್ತಿ ಮತ್ತು ಹೊಣೆಗಾರಿಕೆಗಳ ಪಟ್ಟಿಯು ಜನಪ್ರತಿನಿಧಿಯು ತನ್ನ ಮತ್ತು ತನ್ನ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರ ಚುನಾಯಿತನಾದ 3 ತಿಂಗಳ ಒಳಗೆ ಘೋಷಣೆ ಮಾಡಬೇಕೆಂಬುದನ್ನು ನಿರ್ದಿಷ್ಟ ಪಡಿಸಲಾಗಿದೆ ಅದಲ್ಲದೇ, ಅಧಿಕಾರಾವಧಿ ಮುಕ್ತಾಯಗೊಳ್ಳುವ ತನಕ ಆರ್ಥಿಕ ವರ್ಷ ಮುಕ್ತಾಯವಾದ 1 ತಿಂಗಳ ಒಳಗೆ ಪ್ರತಿ ವರ್ಷ ಘೋಷಿಸಬೇಕೆಂದು ಶಾಸನಾತ್ಮಕ ಅವಕಾಶ ಕಲ್ಪಿಸಲಾಗಿದೆ.

- ಹೀಗೆ ಘೋಷಿಸಲು ವಿಫಲವಾಗುವ ಮತ್ತು ಸುಳ್ಳು ಘೋಷಣೆಯನ್ನು ದಾಖಲುಮಾಡಿದರೆ ಅಂತವರನ್ನು ಸದಸ್ಯತ್ವದಿಂದ ಅನರ್ಹಗೊಳಿಸುವ ಅವಕಾಶವನ್ನು ರಾಜ್ಯ ಚುನಾವಣಾ ಆಯುಕ್ತರಿಗೆ ನೀಡಲಾಗಿದೆ.

- ಹಲವಾರು ಅನುಸೂಚಿಗಳಿಗೆ ತಿದ್ದುಪಡಿಮಾಡಿ ಹೊಸ ವಿಷಯಗಳನ್ನು ಸೇರ್ಪಡೆ ಮಾಡಲಾಗಿದ್ದು 29 ವಿಷಯಗಳನ್ನು ಅನುಸೂಚಿ – 1 ರಲ್ಲಿ ಪಟ್ಟಿ ಮಾಡಲಾಗಿದೆ.

- ಶುದ್ಧ ಕುಡಿಯುವ ನೀರು
- ಗ್ರಾಮೀಣ ವಸತಿ
- ಬಡತನ ನಿರ್ಮೂಲನೆ
- ಗ್ರಾಮೀಣ ರಸ್ತೆಗಳು
- ಶಿಕ್ಷಣ
- ವಿಪತ್ತು ನಿರ್ವಹಣೆ
- ಸಾಮಾಜಿಕ ಅರಣ್ಯ ನಿರ್ಮಾಣ ಪ್ರವಾಸೋದ್ಯಮ
- ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಗ್ರಾಮೀಣ ಕೈಗಾರಿಕೆಗಳು ಹಾಗೂ ಆಹಾರ ಸಂಸ್ಕರಣಾ ಕೈಗಾರಿಕೆಗಳು



- ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿ
- ಪಶುಸಂಗೋಪನೆ
- ಹೈನುಗಾರಿಕೆ
- ಕೋಳಿ ಸಾಕಾಣಿಕೆ ಮತ್ತು ಮೀನುಗಾರಿಕೆ
- ಗ್ರಾಮೀಣ ವಿದ್ಯುದೀಕರಣ
- ಗ್ರಂಥಾಲಯಗಳು
- ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
- ಮಾರುಕಟ್ಟೆ ಸೌಲಭ್ಯ
- ಸಾರ್ವಜನಿಕ ಆರೋಗ್ಯ
- ನೈರ್ಮಲ್ಯ
- ಮಹಿಳಾ ಮತ್ತು ಮಕ್ಕಳ ಕಲ್ಯಾಣ
- ವಿಕಲಚೇತನರು ಮತ್ತು ಮಾನಸಿಕ ಅಸ್ವಸ್ಥರ ಕಲ್ಯಾಣ
- ಅನುಸೂಚಿತ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ
- ಎಲ್ಲಾ ಪ್ರಮಾಣ ಪತ್ರಗಳ ನೀಡುವಿಕೆ
- ಅಂಕಿ ಅಂಶ ನಿರ್ವಹಣೆ
- ಯೋಜನೆ, ಸಹಕಾರ,
- ಗ್ರಾಮೀಣ ಪರಿಸರ ವ್ಯವಸ್ಥೆ ಮತ್ತು ಜೀವಿ ಪರಿಸ್ಥಿತಿ

- ಆದಾಯ ಸೃಜನೆ ಕಾರ್ಯ ಚಟುವಟಿಕೆಗಳು
- ಜ್ಞಾನ ನಿರ್ವಹಣೆ
- ಸಮುದಾಯ ಸ್ವತ್ತು ನಿರ್ವಹಣೆಯಂತಹ ಪ್ರಮುಖ ವಿಷಯಗಳನ್ನು ಅನುಸೂಚಿ 1 ಮತ್ತು 2ಕ್ಕೆ ಸೇರಿಸಲಾಗಿದೆ.
  - ಸುರಕ್ಷಿತ, ಶಾಂತಿಯುತ ಸಹನಶೀಲ, ಕೋಮು ಸೌಹಾರ್ದವನ್ನು ಪೋಷಿಸುವ ಹೆಮ್ಮೆಯ ಸ್ವಾವಲಂಬಿ, ಪರಸ್ಪರ ಗೌರವ ಸೂಚಕವಾದ ಸಮಾಜದ ನಿರ್ಮಾಣ ಮಾಡಲು ಗ್ರಾಮೀಣ ಸ್ಥಳಿಯ ಸಂಸ್ಥೆಗಳಿಗೆ ಅಧಿಕಾರ ಪ್ರಾಪ್ತವಾಗಿದೆ.
- ಹಳ್ಳಿಗಳಲ್ಲಿ ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ, ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳನ್ನು ಪ್ರತಿಬಂದಿಸುವುದು ಗ್ರಾಮ ಪಂಚಾಯಿತಿಯ ಕರ್ತವ್ಯವೆಂದು ಪರಿಗಣಿಸಲಾಗಿದೆ.
- ಮಹಿಳೆಯರಿಗೆ ಲೈಂಗಿಕ ಕಿರುಕುಳ ತಡೆಗಟ್ಟುವುದು ಗ್ರಾಮ ಪಂಚಾಯಿತಿಯ ಕರ್ತವ್ಯವೆಂದು ಪಟ್ಟಿಮಾಡಲಾಗಿದೆ.
  - ಅಪಾಯಕಾರಿ ಕಲ್ಲು ಗಣಿಗಾರಿಕೆ, ತೆರೆದ ಕೊಳವೆ ಬಾವಿಗಳನ್ನು, ಕೊಳವೆ ಬಾವಿಗಳನ್ನು ತೋಡುವುದು ಮತ್ತು ಹೊಂಡಗಳನ್ನು ನಿರ್ಮಿಸುವ ಮೂಲಕ ಸಾರ್ವಜನಿಕ ವಿತ್ತ ಜೀವಿತಗಳಿಗೆ ಅಪಾಯವುಂಟಾಗುವುದನ್ನು ತಡೆಯುವುದು ಗ್ರಾಮ ಪಂಚಾಯಿತಿಯ ಕರ್ತವ್ಯವಾಗಿದೆ.
  - ಗ್ರಾಮೀಣ ಪ್ರದೇಶದಲ್ಲಿ ಯೋಜಿತ ಅಭಿವೃದ್ಧಿಯನ್ನು ನಿಶ್ಚಿತಗೊಳಿಸುವ ಸಲುವಾಗಿ ಕರ್ನಾಟಕ ನಗರ ಮತ್ತು ದೇಶೀಯ ಯೋಜನಾ ಕಾಯಿದೆಯನ್ನು ಮೊಟ್ಟಮೊದಲ ಬಾರಿಗೆ ಗ್ರಾಮೀಣ ಪ್ರದೇಶಕ್ಕೆ ಅಳವಡಿಸಲಾಗಿದೆ.
- ಗ್ರಾಮೀಣ ಭಾಗದಲ್ಲಿ ಯಾವುದಾದರು ಕಟ್ಟಡ ನಿರ್ಮಾಣಕ್ಕೆ ಅರ್ಜಿಸಲ್ಲಿಕೆಯಾದಾಗ ನಿಗದಿತ ಕಾಲಮಿತಿಯಲ್ಲಿ ಅಂತಹ ಅರ್ಜಿಯನ್ನು ವಿಲೇವಾರಿ ಮಾಡಬೇಕು ಇಲ್ಲದಿದ್ದರೆ ಅಂತಹ ಅರ್ಜಿ ಮಂಜೂರಾಗಿದೆ ಎಂದು ಭಾವಿಸಿ ಮಂಜೂರಿ ನೀಡಲಾಗುವುದು ಎಂಬ ಶಾಸನಾತ್ಮಕ ನಿಯಮಕ್ಕೆ ಮತ್ತಷ್ಟು ಅಂಶಗಳನ್ನು ಸೇರಿಸಿ ಈ ಕಲಂಅನ್ನು ಶಕ್ತಿಶಾಲಿಯಾಗಿಸಲಾಗಿದೆ.
- ಈ ಕಲಂನ ಅಡಿಯಲ್ಲಿ ಭಾವಿತ ಮಂಜೂರಿಗೆ ಕಾರಣರಾಗುವ ಸಿಬ್ಬಂದಿ ಮತ್ತು ಅಧಿಕಾರಿಗಳ ಮೇಲೆ ಶಿಸ್ತುಕ್ರಮವನ್ನು ನಿರ್ದಿಷ್ಟಗೊಳಿಸಲಾಗಿದೆ.
- ಅದರಂತೆ ಅನುಸೂಚಿ–2 ರಲ್ಲಿ ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದ ವಿಷಯಗಳನ್ನು ಮತ್ತು ಅನುಸೂಚಿ–3 ರಲ್ಲಿ ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದ ವಿಷಯಗಳನ್ನು ಕ್ರೋಢೀಕರಿಸಲಾಗಿದೆ.
- ಯೋಜನೆಗಳ ಮೇಲ್ಮುಖ ಪಯಣ:
  - ಗ್ರಾಮೀಣ ಭಾಗದ ಯೋಜನೆಗಳನ್ನು ಆಯಾಪ್ರದೇಶದ ನಾಗರಿಕರೇ ತಮ್ಮ ಬೇಕು ಬೇಡಗಳನ್ನು ಮತ್ತು ನೈಜ ಅವಶ್ಯಕತೆಗಳನ್ನು ನಿರ್ಣಯಿಸಿ ರೂಪಿಸಿಕೊಳ್ಳುವ ಮತ್ತು ಅಂತಹ ಯೋಜನೆಗಳು ಗ್ರಾಮೀಣ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಮೂಲಭೂತ ಅಡಿಪಾಯ ಒದಗಿಸುವ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಗ್ರಾಮ ಸ್ವರಾಜ್ಯ ಘಟಕಗಳಾಗಿರುವ ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳ ಮೂಲಕ ಕಳ್ಪಿಸಿ,

ರೂಪಿಸಿ, ಅನುಷ್ಠಾನಗೊಳಿಸಲು ಸಿದ್ಧಪಡಿಸಿ ಜಿಲ್ಲಾ ಮತ್ತು ರಾಜ್ಯಮಟ್ಟಕ್ಕೆ ಮೇಲ್ಮುಖ ಪಯಣವನ್ನು ನಿಗದಿಪಡಿಸಲಾಗಿದೆ.

- ಈ ಮೂಲಕ ಗ್ರಾಮೀಣಭಾಗದ ಯೋಜನೆಗಳು ನೈಜ ಅವಶ್ಯಕತೆಗಳನ್ನು ಒಳಗೊಂಡು ಗ್ರಾಮೀಣ ಭಾಗದ ಜನತೆ ಜೀವನ ಮಟ್ಟದಲ್ಲಿ ಉನ್ನತೀಕರಣವಾಗಿ ಉತ್ತಮ ಜೀವನ ನಡೆಸಲು ಸಹಾಯಕವಾಗುವಂತೆ ಅತ್ಯುತ್ತಮ ಸಾಮಾಜಿಕ ವ್ಯವಸ್ಥೆ ರೂಪಿಸಲು ಮತ್ತು ಭೌತಿಕ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಕಾಯಿದೆ ಬಹುದೊಡ್ಡ ಶಾಸನಾತ್ಮಕ ಬೆಂಬಲ ಒದಗಿಸುತ್ತದೆ.

---

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 09 ಗ್ರಾಪಂಅ 2016

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ:23.02.2016

### ಅಧಿಸೂಚನೆ

ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 44) ರ 1ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮವು ದಿನಾಂಕ:25.02.2016ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

ಸಹಿ/–

**ಡಾ॥ ಎನ್.ನಾಗಾಂಬಿಕಾ ದೇವಿ**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ವರದಿ

# ಪರ್ಯಾಯ ಅಂತರ್ಜಲ ಮೂಲ ಪತ್ತೆಗೆ ಇಸ್ರೋ ತಂತ್ರಜ್ಞಾನ ಬಳಕೆ

ರಾಜ್ಯದಲ್ಲಿ ಬತ್ತಿ ಹೋಗಿರುವ ಜಲ ಮೂಲಗಳ ಬದಲಿಗೆ ಪರ್ಯಾಯ ಜಲ ಮೂಲಗಳ ಪತ್ತೆಗೆ ಭಾರತೀಯ ಬಾಹ್ಯಾಕಾಶ ಸಂಸ್ಥೆಯ (ಇಸ್ರೋ) ನೆರವು ಹಾಗೂ ಸಹಯೋಗದೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವಿಶೇಷ ಕಾರ್ಯಕ್ರಮವನ್ನು ರಾಜ್ಯದಲ್ಲಿ ಪ್ರಾರಂಭಿಸಲಿದೆ.

ಇತ್ತೀಚೆಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎ. ಎಸ್. ಕಿರಣ್‌ಕುಮಾರ್‌ರವರೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್. ಕೆ. ಪಾಟೀಲರವರು



ನಡೆಸಿದ ಎರಡು ತಾಸಿನ ಸುದೀರ್ಘ ಸಭೆಯ ಸಂದರ್ಭದಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಪ್ರಸ್ತುತ ಪ್ರಾಯೋಗಿಕವಾಗಿ ರಾಜ್ಯದಲ್ಲಿ ತೀವ್ರ ಸಂಕಷ್ಟದ ಪರಿಸ್ಥಿಯಲ್ಲಿರುವ 600 ಗ್ರಾಮಗಳಲ್ಲಿ ಹಾಗೂ ಕಲಬುರ್ಗಿ ಜಿಲ್ಲೆಯ ಅಳಂದ ತಾಲ್ಲೂಕು, ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕು, ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕುಗಳಲ್ಲಿ ಇಸ್ರೋ ತಂತ್ರಜ್ಞಾನ ಬಳಕೆ ಮಾಡಿ, ಪರ್ಯಾಯ ಅಂತರ್ಜಲ ಮೂಲಗಳನ್ನು ತುರ್ತು ಪತ್ತೆ ಹಚ್ಚಲು ತಕ್ಷಣದಿಂದಲೇ ಕಾರ್ಯೋನ್ಮುಖವಾಗುವುದಾಗಿ ಇಸ್ರೋ ಅಧ್ಯಕ್ಷರು ಸಚಿವರಿಗೆ ತಿಳಿಸಿದರು.

ರಾಜ್ಯ ಸರ್ಕಾರದ ವತಿಯಿಂದ ಭೂಗರ್ಭ ತಜ್ಞರಾದ ಕೇಂದ್ರ ಸರ್ಕಾರದ ಮಾಜಿ ಅಂತರ್ಜಲ ಮಂಡಳಿಯ ಆಯುಕ್ತರಾಗಿ ಸೇವೆ ಸಲ್ಲಿಸಿದ ಶ್ರೀ ರಾಮಶೇಷ ಮತ್ತು ಶ್ರೀ ಆರ್. ಹೆಚ್. ಸಾವ್ಕಾರ್‌ರವರು ಈ ಕಾರ್ಯದಲ್ಲಿ ಇಸ್ರೋ ಸಂಸ್ಥೆಯೊಂದಿಗೆ ಕೈಜೋಡಿಸುವರೆಂದು ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದರು. ಇಸ್ರೋ ತಂತ್ರಜ್ಞಾನ ಮತ್ತು ದೂರ ಸಂವೇದಿ ಕ್ಷೇತ್ರದಲ್ಲಿ ಇಸ್ರೋ ಸಂಸ್ಥೆಯು ಸಾಧಿಸಿರುವ ಕ್ರಾಂತಿಕಾರಕ ಮಾಹಿತಿಯನ್ನು

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಅಧ್ಯಕ್ಷರೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಪರ್ಯಾಯ ಅಂತರ್ಜಲ ಮೂಲ ಪತ್ತೆ ಕುರಿತು ಚರ್ಚೆ ನಡೆಸಿದರು.

ಸಂಪಾದಕರು, ಕರ್ನಾಟಕ ವಿಕಾಸ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



ಸದುಪಯೋಗ ಮಾಡಿಕೊಂಡು ಇಡೀ ಕರ್ನಾಟಕ ರಾಜ್ಯದಲ್ಲಿ ಲಭ್ಯವಿರುವ ಅಂತರ್ಜಲ ಮೂಲದ ಪೂರ್ಣ ಪ್ರಮಾಣದ ಅಂಕಿ – ಸಂಖ್ಯೆ ಮತ್ತು ನಕಾಶೆಗಳನ್ನು ಸಿದ್ದಪಡಿಸಿ, ಕುಡಿಯುವ ನೀರಿನ ಸಮಸ್ಯೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇಸ್ರೋ ಸಹಯೋಗದೊಂದಿಗೆ ಪೂರ್ಣ ಪ್ರಮಾಣದ ಕಾರ್ಯ ಕೈಗೊಳ್ಳುವುದೆಂದು ಸಚಿವರು ತಿಳಿಸಿದರು. ತಂತ್ರಜ್ಞಾನ ಈಗಾಗಲೇ ಸಂಪೂರ್ಣವಾಗಿ ಲಭ್ಯವಿರುವುದರಿಂದ ಕೇವಲ ಈ ತಂತ್ರಜ್ಞಾನವನ್ನು ಅಗತ್ಯವಿರುವ ಕಡೆ ಅನ್ವಯಿಸಿ ಪ್ರಯೋಜನ ಪಡೆದುಕೊಳ್ಳಲು ತೀರ್ಮಾನಿಸಲಾಯಿತು.

ದೂರ ಸಂವೇದಿ ಕ್ಷೇತ್ರದಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆಯು ತಾನು ಸಾಧಿಸಿರುವ ಪ್ರಗತಿಯನ್ನು ಸಚಿವರಿಗೆ ಅರ್ಧಗಂಟೆಯ ಪ್ರಾತ್ಯಕ್ಷತೆಯ ಮೂಲಕ ಇಸ್ರೋ ಅಧ್ಯಕ್ಷರು ಮತ್ತು ಸಂಸ್ಥೆಯ ಹಿರಿಯ ಅಧಿಕಾರಿಗಳು, ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಶ್ರೀ ಸುಭಾಷ್ ಚಂದ್ರ ರವರು ವಿವರಿಸಿದರು. ವಿಶ್ವದಲ್ಲಿಯೇ ದೂರ ಸಂವೇದಿ ಕ್ಷೇತ್ರದಲ್ಲಿ ಮೇರುಸದೃಶ ಕ್ರಾಂತಿ ಕೈಗೊಂಡಿರುವ ಬಗ್ಗೆ ಸಚಿವರು ಇಸ್ರೋ ಸಂಸ್ಥೆಯನ್ನು ಕೊಂಡಾಡಿದರು. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆಯ ಸಾಧನೆ ವಿಶ್ವದ ಮೆಚ್ಚುಗೆ ಗಳಿಸಿದೆ ಎಂದು ಸಚಿವರು ಶ್ಲಾಘಿಸಿದರು. ಅಂತರ್ಜಲ ಮೂಲವಲ್ಲದೆ ಬೇರೆ ಬೇರೆ ವಲಯಗಳಲ್ಲಿ ವಿಶೇಷವಾಗಿ ಗ್ರಾಮೀಣ ಸರ್ಕಾರಿ ಆಸ್ತಿ ನಿರ್ವಹಣೆ ಮತ್ತು ಮೂಲ ಸೌಕರ್ಯ ಲಭ್ಯತೆಯಅನುಸಾರ ಮಾಹಿತಿಯ ಆಧಾರದ ಮೇಲೆ ಗ್ರಾಮೀಣ ಯೋಜನೆ ರೂಪಿಸುವ ಕಾರ್ಯಕ್ಕೆ ತರಬೇತಿ ನೀಡುವ ಮತ್ತು ಗ್ರಾಮ ಪಂಚಾತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರಿಗೆ ಸಾಮರ್ಥ್ಯ ಅಭಿವೃದ್ಧಿಗೆ ತರಬೇತಿ ನೀಡಲು ಸಹಯೋಗಕ್ಕೆ ಇಸ್ರೋ ಸಿದ್ಧವಿದೆ ಎಂದು ಶ್ರೀ ಕಿರಣ್‌ಕುಮಾರ್‌ರವರು ತಿಳಿಸಿದರು.

ಈ ಸಂದರ್ಭದಲ್ಲಿ ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿಯಲ್ಲಿ ಗ್ರಾಮೀಣ ಯೋಜನೆ ರೂಪಿಸುವ ವ್ಯವಸ್ಥೆಯನ್ನು ಪುನರ್ ವ್ಯಾಖ್ಯಾನ ಮಾಡಿರುವುದಾಗಿ, ಇನ್ನು ಮುಂದೆ ಗ್ರಾಮೀಣ ಯೋಜನೆಗಳು ಗ್ರಾಮ ಸಭೆಯಲ್ಲಿ ರೂಪುಗೊಂಡು ಮೇಲ್ಮುಖ ಪಯಣ ಕೈಗೊಳ್ಳಲು ಶಾಸನಾತ್ಮಕ ಅವಕಾಶ ಕಲ್ಪಿಸಲಾಗಿದೆ ಎಂದು, ಅದಕ್ಕೆ ಇಸ್ರೋ ತಂತ್ರಜ್ಞಾನ ಬಳಸಿಕೊಳ್ಳಲು ಸೂಕ್ತ ಯೋಜನೆ ರೂಪಿಸಿರುವುದಾಗಿ ಸಚಿವರು ಹೇಳಿದರು. ಮೈಸೂರಿನಲ್ಲಿ ರಾಜ್ಯ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು ಈ ಉದ್ದೇಶಕ್ಕಾಗಿ ನೋಡಲ್ ಸಂಸ್ಥೆಯನ್ನಾಗಿ ನಾಮಕರಣ ಮಾಡುವುದಾಗಿ ಮಾನ್ಯ ಸಚಿವರು ಸರ್ಕಾರದ ನಿರ್ಣಯವನ್ನು ತಿಳಿಸಿದರು. ಈ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಶ್ರೀ ಸುಭಾಷ್ ಚಂದ್ರ, ಭೂಗರ್ಭ ತಂತ್ರಜ್ಞರಾದ ಶ್ರೀ ರಾಮಶೇಷ ಮತ್ತು ಶ್ರೀ ಆರ್. ಹೆಚ್. ಸಾವ್ಕಾರ್ ಹಾಗೂ ಮತ್ತಿತರ ಅಧಿಕಾರಿಗಳು ಪಾಲ್ಗೊಂಡಿದ್ದರು.

ವರದಿ

# ಅಂತರ್ಜಲ ಮರುಪೂರಣ – ಚಿತ್ರದುರ್ಗ ಜಿಲ್ಲೆಗೆ "ರಾಷ್ಟ್ರ ಪ್ರಶಸ್ತಿ"

– ನಾಗೇಂದ್ರ ಕುಮಾರ್.ಜೆ.ಟಿ

ಫೆಬ್ರವರಿ 2ನೇ 2016 ರಂದು ನವದೆಹಲಿಯ ವಿಜ್ಞಾನಭವನದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್, ಕುಡಿಯುವ ನೀರು ಮತ್ತು ಶೌಚಾಲಯ ಸಚಿವರಾದ ಶ್ರೀ ಬಿರೇಂದ್ರ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕುಡಿಯುವ ನೀರಿನ ಕೊಳವೆ ಬಾವಿ ಮರುಪೂರಣ ಘಟಕಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಚಿತ್ರದುರ್ಗ ಜಿಲ್ಲೆಯ ನಿಕಟಪೂರ್ವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಮಂಜುಶ್ರೀ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ನಿತೇಶ್ ಪಟೇಲ್ ರವರಿಗೆ ಸಚಿವರು ಪ್ರಶಸ್ತಿ ಪ್ರದಾನ ಮಾಡಿದರು.

ಕುಡಿಯುವ ನೀರಿನ ಕೊಳವೆ ಬಾವಿ ಮರುಪೂರಣ ಘಟಕಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಚಿತ್ರದುರ್ಗ ಜಿಲ್ಲೆ ಪ್ರಶಸ್ತಿಗೆ ಭಾಜನವಾಗಿರುತ್ತದೆ.




ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಜ್ಯದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಸುಭಾಷ್ ಚಂದ್ರ, ಗ್ರಾಮೀಣಾಭಿವೃದ್ಧಿ ಆಯುಕ್ತರಾದ ಶ್ರೀ ಮುನಿಷ್ ಮೌದ್ಗಿಲ್, ವಿಶೇಷ ಆಯುಕ್ತರಾದ ಶ್ರೀ ಪ್ರಭಾಷ್ ಚಂದ್ರ ರೇ, ಜಂಟಿ ನಿರ್ದೇಶಕರು(ತಾಂತ್ರಿಕ) ಶ್ರೀ ಚಂದ್ರಶೇಖರ ಎಂ ಮಸಗುಪ್ಪಿ, ಸಹಾಯಕ ನಿರ್ದೇಶಕರು(ಆಡಳಿತ) ಶ್ರೀ ಕೃಷ್ಣೇಗೌಡ ತಾಯಣ್ಣನವರ್, ಶ್ರೀಮತಿ ಅನುಸೂಯಮ್ಮ, ಶ್ರೀ ಜಗನ್ನಾಥ್, ಶ್ರೀ ನಾಗೇಂದ್ರಕುಮಾರ, ರವೀಂದ್ರನಾಥ್, ಮಧುಸೂದನ್, ಗ್ರಾಮಪಂಚಾಯಿತಿ ಅಧ್ಯಕ್ಷರು, ನರೇಗಾ ಯೋಜನೆಯಡಿಯ 100 ದಿನ ಉದ್ಯೋಗ ಪಡೆದಿರುವ ಕೂಲಿಕಾರ್ಮಿಕರು ಭಾಗವಹಿಸಿದ್ದರು.

ರಾಜ್ಯ ಐಇಸಿ ಸಂಯೋಜಕರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಾಬಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು

ವರದಿ



ನಾಗರತ್ನ ಭಟ್

# ರಾಜ್ಯದಲ್ಲಿ ಮೊದಲ ಬಾರಿಗೆ ಸ್ವಚ್ಛತೆಗೆ ಸಂದ ಗೌರವ

ಸ್ವಚ್ಛತೆ ಸ್ವಾಭಿಮಾನ ಘನತೆಯ ಸಂಕೇತ. ಸ್ವಚ್ಛತೆಗಾಗಿ ಇಡೀ ಸಮಾಜ, ಸಮುದಾಯವೇ ತೊಡಗಿಸಿಕೊಂಡಾಗ ಮಾತ್ರ ಸಾಧಿಸಬಹುದು. ಇಲ್ಲಿ ಕಾರ್ಯನಿರ್ವಹಿಸಲು ಭಾಷಣ, ಘೋಷಣೆಗಳಿಗಿಂತ ಭಾವನಾತ್ಮಕ ಸ್ಪಂದನೆ ಅಗತ್ಯವಾಗಿರುತ್ತದೆ. ಜನರ ಮನದಾಳಕ್ಕೆ ತಲುಪಿ, ನಿಜವಾದ ಪರಿವರ್ತನೆ ಮಾಡುವುದು ಮುಖ್ಯವಾಗಿರುತ್ತದೆ. ಈ ಕೆಲಸಕ್ಕೆ ಸಕಾರಾತ್ಮಕ ಸ್ಪಂದನೆ, ನೇರ ವಿಚಾರ ವಿನಿಮಯ, ಸಕಾಲಿಕ ನೆರವು, ಪೂರಕ ಮಾರ್ಗದರ್ಶನ ಪ್ರಮುಖ ಪಾತ್ರ ವಹಿಸುತ್ತವೆ.

2006 ರಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನಕ್ಕಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಯ TSC ಘಟಕಕ್ಕೆ ಸಂಯೋಜಕರಾಗಿ ನಿಯುಕ್ತಿಗೊಂಡ ಶ್ರೀಮತಿ ಮಂಜುಳಾ ಜಿ. ಇವರು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು, ಜಿಲ್ಲೆಯ ಐದು ತಾಲ್ಲೂಕುಗಳು ಹಾಗೂ



203 ಗ್ರಾಮ ಪಂಚಾಯತಿಗಳಲ್ಲೂ (ಪ್ರಸ್ತುತ 230 ಗ್ರಾಮ ಪಂಚಾಯತಿ) ಸ್ವಚ್ಛತೆಯ ಸಂದೇಶ ಮುಟ್ಟಿಸುವಲ್ಲಿ ಎಲ್ಲಾ ಅಧಿಕಾರಿಗಳು, ಗ್ರಾಮ ಪಂಚಾಯತಿ ಸಿಬ್ಬಂದಿಗಳ, ಸಮಾಲೋಚಕರ ಸಹಕಾರ, ಸಹಭಾಗಿತ್ವ ಹಾಗೂ ಮೇಲಾಧಿಕಾರಿಗಳ ಮಾರ್ಗದರ್ಶನದೊಂದಿಗೆ ರಾಷ್ಟ್ರದಲ್ಲಿ ಹನ್ನೊಂದನೆಯ ಹಾಗೂ ರಾಜ್ಯದಲ್ಲಿ ಪ್ರಥಮ ODF ಜಿಲ್ಲೆಯಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು 2012 ರಲ್ಲಿ ಘನತೆವೆತ್ತ ರಾಷ್ಟ್ರಪತಿಗಳ ಪುರಸ್ಕಾರ ಪಡೆಯುವಲ್ಲಿ ಇವರ ಶ್ರಮ ಶ್ಲಾಘನೀಯವಾದದ್ದು.

ಹೀಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿಯಾಗಿರುವ ಶ್ರೀಮತಿ ಮಂಜುಳಾರವರು ತಮ್ಮ 29 ವರ್ಷದ ಸೇವಾ ಅವಧಿಯಲ್ಲಿ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ದಿನಾಂಕ:26–01–2016 ರಂದು ಇವರ ಸೇವಾ ಮನೋಭಾವವನ್ನು ಪರಿಗಣಿಸಿ, ಜಿಲ್ಲಾ ಮಟ್ಟದಲ್ಲಿ ಉತ್ತಮ ಸೇವೆ ಸಲ್ಲಿಸಿದವರಿಗೆ ಸರ್ಕಾರ ಕೊಡ ಮಾಡುವ "ಸರ್ವೋತ್ತಮ ಪ್ರಶಸ್ತಿ" ಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ಬಿ. ರಮಾನಾಥ ರೈಯವರು ಗಣ್ಯರ ಸಮ್ಮುಖದಲ್ಲಿ ನೀಡಿ, ಗೌರವಿಸಿರುತ್ತಾರೆ.

ಇದು ಕೇವಲ ಮಂಜುಳಾರವರಿಗಷ್ಟೇ ಅಲ್ಲ, ಇಡೀ ಸಮಾಜದಲ್ಲಿ ಸ್ವಚ್ಛತೆಗಾಗಿ ಶ್ರಮಿಸುವವರಿಗೆಲ್ಲ ಸಂದ ಗೌರವವೆಂದು ಭಾವಿಸೋಣ. ಸೇವೆ, ಸಾಧನೆ, ಸನ್ನಡತೆ, ಪ್ರಾಮಾಮಾಣಿಕತೆಯನ್ನು ಗುರುತಿಸಿದ ಎಲ್ಲರಿಗೂ ಇಡೀ ಸ್ವಚ್ಛ ಭಾರತ ಮಿಷನ್ ವತಿಯಿಂದ ಅಭಿನಂಧನೆಗಳು.

ಶ್ರೀಮತಿ ಮಂಜುಳಾರವರು ಸ್ವಚ್ಛತಾ ಆಂದೋಲನದ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಕ್ಕಾಗಿ ಸರ್ಕಾರದಿಂದ "ಸರ್ವೋತ್ತಮ ಪ್ರಶಸ್ತಿ" ಪಡೆದಿರುತ್ತಾರೆ.

ಕರ್ನಾಟಕ ರಾಜ್ಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಸಂಸ್ಥೆ,
ಕಾವೇರಿ ಭವನ, ಬೆಂಗಳೂರು

# ಮಾಶಾಳ ಖಾತ್ರಿ ಇಟ್ಟಿಗೆ ಬಲು ಗಟ್ಟಿ

ಲೇಖನ



ತುಳಜಾರಾಂ ಸೋ. ಪವಾರ್

ಉದ್ಯೋಗ ಖಾತ್ರಿ ಯೋಜನೆಯಡಿ ಕೇವಲ ಕೌಶಲ್ಯ ರಹಿತ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಅವರಿಗೆ ತರಬೇತಿ ನೀಡಿ ಕೌಶಲ್ಯ ರನ್ನಾಗಿಸುವುದು ಗ್ರಾಮಿಣಾಭಿವೃದ್ಧಿ ಸಚಿವಾಲಯದ ಆಶಯವಾಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಮಾಶಾಳ ಗ್ರಾಮಕ್ಕೆ ಭೇಟಿ ನೀಡಿದರೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿ ಕಾರ್ಮಿಕರು ಉನ್ನತ ಗುಣಮಟ್ಟದ ಗಟ್ಟಿ ಮುಟ್ಟಾದ ಇಟ್ಟಿಗೆಗಳನ್ನು ತಯಾರಿಸುವುದನ್ನು ಕಾಣಬಹುದು. ಈ ಯೋಜನೆಯಲ್ಲಿ ಕೇವಲ ಕೂಲಿಗಾಗಿ ಕೆಲಸ ಮಾಡಬೇಕು ಎಂಬ ತಪ್ಪು ಗ್ರಹಿಕೆಯನ್ನು ಕಲಬುರಗಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಅಳಿಸಿ ಹಾಕಿದ್ದಾರೆ.



ಮಾಶಾಳ ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ 150 ಮಾನವ ದಿನಗಳನ್ನು ಪೂರೈಸಿದ ಸುಮಾರು 16 ಕೂಲಿಕಾರರು ಇಟ್ಟಿಗೆ ತಯಾರಿಕೆಯಲ್ಲಿ ತೊಡಗಿದ್ದಾರೆ. ದಿನಕ್ಕೆ ಸುಮಾರು 400 ಇಟ್ಟಿಗೆಗಳನ್ನು ತಯಾರಿಸುತ್ತಿದ್ದಾರೆ. ಈ ಇಟ್ಟಿಗೆಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಳ್ಳುವ ಕಟ್ಟಡಗಳಿಗೆ ಬಳಸಿಕೊಳ್ಳಲಾಗುವುದು ಹಾಗೂ ಇಂದಿರಾ ಅವಾಸ್ ಯೋಜನೆಯಡಿ ನಿರ್ಮಿಸುವ ಮನೆಗಳಿಗೂ ಉಚಿತವಾಗಿ ಫಲಾನುಭವಿಗಳಿಗೆ ನೀಡಲಾಗುವುದು. ಇದರಿಂದ ಮನೆಗಳನ್ನು ಕಡಿಮೆ ಖರ್ಚಿನಲ್ಲಿ ನಿರ್ಮಿಸಿಕೊಳ್ಳಲು ಸಹಾಯಕವಾಗುವುದು.

ಜಿಲ್ಲೆಯ ಕಾಳಗಿ, ಪಟ್ಟಣದಂತಹ ಇತರ ಗ್ರಾಮಗಳಲ್ಲಿಯೂ ಉದ್ಯೋಗ ಖಾತ್ರಿಯಡಿ ಕೆಲಸ ಮಾಡುವ ಕೂಲಿಗಾರರ ಸಂಖ್ಯೆ ಹೆಚ್ಚಿಗಿದ್ದಲ್ಲಿ ಈ ರೀತಿಯ ಇಟ್ಟಿಗೆ ತಯಾರಿಸುವ ಘಟಕಗಳನ್ನು ಪ್ರಾರಂಭಿಸಲು ಹಾಗೂ ಕೂಲಿಕಾರರು ತಮ್ಮದೇ ಆದ ಘಟಕಗಳನ್ನು ಪ್ರಾರಂಭಿಸಿ ಆರ್ಥಿಕವಾಗಿ ಸಬಲರಾಗಲು ಮುಂದೆ ಬಂದರೆ ಹೆಚ್ಚಿನ ಪ್ರೋತ್ಸಾಹ ಸಹ ನೀಡಲು ಯೋಜಿಸಲಾಗಿದೆ

ಛಾಯಾಗ್ರಾಹಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಲಬುರಗಿ-585102



ಎಂಬುದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಭಿಪ್ರಾಯ.

ಉದ್ಯೋಗ ಖಾತ್ರಿ ಯೋಜನೆಯಡಿ ಕೇವಲ ಕೌಶಲ್ಯ ರಹಿತ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಅವರಿಗೆ ತರಬೇತಿ ನೀಡಿ ಕೌಶಲ್ಯರನ್ನಾಗಿಸುವುದು ಗ್ರಾಮಿಣಾಭಿವೃದ್ಧಿ ಸಚಿವಾಲಯದ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಮಾಶಾಳ ಗ್ರಾಮದ 10 ಹಾಗೂ ಇನ್ನಿತರ ಗ್ರಾಮ ಪಂಚಾಯತಿಗಳ 6 ಹೀಗೆ ಒಟ್ಟು 16 ಕೂಲಿ ಕಾರ್ಮಿಕರಿಗೆ ಹೈದ್ರಾಬಾದಿನ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ 4 ದಿನಗಳ ಕಾಲ ಮಣ್ಣಿನಿಂದ ಇಟ್ಟಿಗೆ ತಯಾರಿಸುವ ತಂತ್ರಜ್ಞಾನದ ತರಬೇತಿ ಪಡೆದ ಪ್ರಯುಕ್ತ ಸದ್ಯ ಮಾಶಾಳ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಇಟ್ಟಿಗೆಗಳನ್ನು ನಿರ್ಮಿಸುತ್ತಿದ್ದಾರೆ.

**ಮಾಶಾಳ ಇಟ್ಟಿಗೆ ತಯಾರಿಸುವ ವಿಧಾನ:**

ಮಾಶಾಳ ಇಟ್ಟಿಗೆಗಳು ಪರಿಸರ ಸ್ನೇಹಿಯಾಗಿದ್ದು, ಇವುಗಳನ್ನು ಸುಡುವ ಅವಶ್ಯಕತೆ ಇಲ್ಲ. ಇವು ಸುಟ್ಟ ಇಟ್ಟಿಗೆಗಳಿಗಿಂತ ಎರಡು ಪಟ್ಟು ಗಾತ್ರದಲ್ಲಿ ದೊಡ್ಡದಾಗಿದ್ದು, ನುಣುಪಾಗಿವೆ ಹಾಗೂ ಗಟ್ಟಿಮುಟ್ಟಾಗಿವೆ. ಮಧ್ಯಮ ಗಾತ್ರದ 10 ಬುಟ್ಟಿ ಹಾಳು ಮಣ್ಣು, 2 ಬುಟ್ಟಿ ಕಲ್ಲಿನ ಪುಡಿ ಹಾಗೂ ಒಂದು ಬುಟ್ಟಿ ಸಿಮೆಂಟನ್ನು ಹದ ಬರುವವರೆಗೆ ಸುಣ್ಣದ ನೀರನ್ನು ಹಾಕಿ ಮಿಶ್ರಣ ತಯಾರಿಸಿಕೊಳ್ಳಲಾಗುವುದು. 9 ಕೆ.ಜಿ. ಮಿಶ್ರಣವನ್ನು ಯಂತ್ರಕ್ಕೆ ಹಾಕಿ ಒತ್ತುವುದರಿಂದ ಇಟ್ಟಿಗೆ ತಯಾರಾಗುವುದು. ಮೇಲೆ ತಿಳಿಸಿದ ಮಿಶ್ರಣದಿಂದ ಸುಮಾರು 13–14 ಇಟ್ಟಿಗೆಗಳು ತಯಾರಾಗುವವು. ಈ ಇಟ್ಟಿಗೆಯನ್ನು 21 ದಿನಗಳ ಕಾಲ ನೀರಿನಿಂದ ಕ್ಯೂರಿಂಗ್ ಮಾಡುವುದರಿಂದ ಸಾಮಾನ್ಯ ಇಟ್ಟಿಗೆಗಳಿಗಿಂತ ಬಲಿಷ್ಠವಾಗುವವು.

ಉದ್ಯೋಗ ಖಾತ್ರಿ ಯೋಜನೆಯಡಿ ಕೆಲವೊಂದು ಯಂತ್ರಗಳನ್ನು ಬಳಸಬಹುದಾಗಿದ್ದು, ಇವುಗಳಲ್ಲಿ ಇಟ್ಟಿಗೆ ತಯಾರಿಸುವ ಯಂತ್ರವೂ ಒಂದಾಗಿದೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯವರು ಕಂಡು ಹಿಡಿದ ಮರ್ದಿನಿ ಪ್ರೆಸ್ ಮಣ್ಣಿನ ಇಟ್ಟಿಗೆ ತಯಾರಿಸುವ ಯಂತ್ರವನ್ನು ಬೆಂಗಳೂರಿನ ಮಹಿಮಾಯಾ ಏಜೆನ್ಸಿಯವರು ತಯಾರಿಸಿ 84 ಸಾವಿರ ರೂ.ಗಳಲ್ಲಿ ಸರಬರಾಜು ಮಾಡಿದ್ದಾರೆ. ಈ ಯಂತ್ರದಿಂದ ತಯಾರಾದ ಕಂಪ್ರೆಸ್ಡ್ ಸ್ಟೆಬಿಲೈಜ್ಡ್ ಅರ್ದನ್ ಬ್ಲಾಕ್‌ಗಳು ಮಾದರಿಯಾಗಿದ್ದು, ಇವುಗಳ ಸಾಮರ್ಥ್ಯ ಮತ್ತು ಒತ್ತಡಗಳನ್ನು ಬೆಂಗಳೂರಿನಲ್ಲಿ ಪರೀಕ್ಷಿಸಲಾಗಿದೆ. ಇವುಗಳಿಗೆ "ಮಾಶಾಳ ಖಾತ್ರಿ ಇಟ್ಟಿಗೆ" ಎಂದು ಹೆಸರಿಡಲಾಗಿದೆ.



ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿ ಫೆಬ್ರವರಿ 2 ರಂದು ವಿಜ್ಞಾನ ಭವನದಲ್ಲಿ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ದಿನಾಚರಣೆಗೆ ನಾನಾ ರಾಜ್ಯಗಳಿಂದ 150 ಮಾನವ ದಿನಗಳನ್ನು ಪೂರೈಸಿರುವ ಕೂಲಿ ಕಾರ್ಮಿಕರನ್ನು ಆಹ್ವಾನಿಸಲಾಗಿದೆ. ಕಲಬುರಗಿ ಜಿಲ್ಲೆಯಿಂದ ಮಾಶಾಳ ಗ್ರಾಮದಲ್ಲಿ 150 ಮಾನವ ದಿನಗಳನ್ನು ಪೂರೈಸಿರುವ ದತ್ತಪ್ಪ ಬಸಪ್ಪ ಮುಗಳೆ ಅವರೂ ಒಬ್ಬರಾಗಿದ್ದು, ಅವರು ಈ ಸಮಾರಂಭದಲ್ಲಿ ಭಾಗವಹಿಸುವುದಲ್ಲದೇ ಅವಕಾಶ ಸಿಕ್ಕರೆ ತಮ್ಮ ಅನುಭವಗಳನ್ನು ಪ್ರಧಾನ ಮಂತ್ರಿಗಳೊಂದಿಗೆ ಹಂಚಿಕೊಳ್ಳಲಿದ್ದಾರೆ.

ಲೇಖನ

# ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುಷ್ಟಾನದಲ್ಲಿ "ರೋಜಗಾರ್ ದಿವಸ್"ದ ಪಾತ್ರ



ನಾಗರಾಜ ಆರ್. ಎಚ್.

ಸರ್ಕಾರದ ಯಾವುದೇ ಯೋಜನೆಗಳಿರಲಿ, ಕಾರ್ಯಕ್ರಮಗಳಿರಲಿ ಅದರ ಸಮರ್ಪಕ ಅನುಷ್ಠಾನವು, ಮೇಲುಸ್ತುವಾರಿ ಹಾಗೂ ಸಮುದಾಯದ ಸಹಭಾಗಿತ್ವವು ಅಷ್ಟೇ ಪ್ರಮುಖವಾಗಿರದೇ ಸಮುದಾಯವನ್ನು ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಮಾಹಿತಿಯ ಹಂಚಿಕೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ.



ಗ್ರಾಮ ಪಂಚಾಯತಿಯಲ್ಲಿ 'ರೋಜಗಾರ್ ದಿವಸ್'ನ್ನು ಆಚರಿಸುತ್ತಿರುವುದರಿಂದ ಜನರಿಗೆ ಯೋಜನೆಗಳ ಬಗ್ಗೆ ಮಾಹಿತಿ ದೊರೆತಂತಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿಯುವ ಕುಟುಂಬಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ನಿಟ್ಟನಲ್ಲಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರಗಳು ಕಾಯಿದೆಯಲ್ಲಿ ಜಾರಿಗೆ ತಂದಂತಹ " ಕಾಮ್ ಮಾಂಗೋ ಅಭಿಯಾನ ಮತ್ತು ರೋಜ್ಗಾರ್ ದಿವಸ್" ಇದು ಉತ್ತಮವಾದ ಒಂದು ಅಂಶ ಎನ್ನಬಹುದಾಗಿದೆ. ಏಕೆಂದರೆ ಎಷ್ಟೋ ಯೋಜನೆಗಳು ಅನುಷ್ಠಾನದ ಹಂತದಲ್ಲಿ ಅದರ ಸಾಧಕ ಬಾಧಕಗಳನ್ನು ಗಮನಿಸಿದಾಗ ಯೋಜನೆಯ ಬಗ್ಗೆ ಜನರಿಗೆ ಸರಿಯಾದ ತಿಳುವಳಿಕೆಯನ್ನು ನೀಡದೆ ಇರುವದರಿಂದ ಯೋಜನೆಯಲ್ಲಿ ಜನರ ಸಹಭಾಗಿತ್ವ, ಸಮರ್ಪಕ ಅನುಷ್ಠಾನ ಹಾಗೂ ನಿರ್ದಿಷ್ಟ ಉದ್ದೇಶ ಈಡೇರದೆ ಇರುವುದು ಮುಖ್ಯ ಅಂಶವಾಗಿ ಕಂಡು ಬರುತ್ತದೆ.

ಈ ನಿಟ್ಟಿನಲ್ಲಿ ಸರ್ಕಾರವು ಉದ್ಯೋಗ ಖಾತರಿ ಯೋಜನೆಯಲ್ಲಿ "ರೋಜಗಾರ್ ದಿವಸ್' ಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿದೆ. ಈ ಪ್ರಕ್ರಿಯೆಯನ್ನು ಗ್ರಾಮ ಪಂಚಾಯತಿಯ ಹಂತದಲ್ಲಿ ಒಂದು ಜನಾಂದೋಲನ ರೀತಿಯಲ್ಲಿ ಅನುಷ್ಠಾನಕ್ಕೆ ಸೂಚಿಸಲಾಗಿದೆ. ಹಾಗಾಗಿ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನದಲ್ಲಿ ಇದು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ ಎಂದರೆ ತಪ್ಪಾಗಲಾರದು.

ಅಂಚೆ- ಬಿಣಗಾ, ತಾ- ಕಾರವಾರ, , ಜಿಲ್ಲೆ - ಉತ್ತರ ಕನ್ನಡ, ಪಿನ್ ಕೋಡ- 581 307




ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ರಾಜ್ಯದಾದ್ಯಂತ ಗ್ರಾಮ ಪಂಚಾಯತಿ ಯಲ್ಲಿ ಅನುಷ್ಠಾನವಾಗುತ್ತಿದ್ದು, ಇದು ದುಡಿಯುವ ಕೈಗಳಿಗೆ ಕೆಲಸವನ್ನು ನೀಡುವ ಯೋಜನೆ ಆಗಿದೆ. ಯೋಜನೆಯಲ್ಲಿ ದುಡಿಯುವ ಕೈಗಳಿಗೆ ಕೆಲಸವನ್ನು ನೀಡುವುದರೊಂದಿಗೆ ಗ್ರಾಮದಲ್ಲಿ ಆಸ್ತಿ ನಿರ್ಮಾಣದ ಜೊತೆಗೆ ಗ್ರಾಮೀಣ ಜನರ ಬಡತನದ ಜೀವನೋಪಾಯದ ಮೂಲಗಳನ್ನು ಬಲಪಡಿಸು ವುದಾಗಿದೆ.

'ರೋಜಗಾರ್ ದಿವಸ್' ದಲ್ಲಿ ಕೂಲಿ ಕಾರ್ಮಿಕರ ಪರವಾಗಿ ಸಾಕಷ್ಟು ಗುಣಾತ್ಮಕ ಅಂಶಗಳು ಸೇರಿವೆ, ಯೋಜನೆಯಲ್ಲಿ ಹೆಸರನ್ನು ನೋಂದಾಯಿಸಿ ಕೊಂಡಿರುವ ಕುಟುಂಬಗಳಿರಲಿ, ಕೂಲಿಕಾರ್ಮಿಕರಿರಲಿ ಅಥವಾ ನೋಂದಾಯಿಸದೇ ಇರುವ ಕುಟುಂಬಗಳೇ ಇರಲಿ ಅವರೆಲ್ಲರನ್ನು ಯೋಜನೆಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವ ಮೂಲಕ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಗ್ರಾಮ ಪಂಚಾಯತಿಯ ಹಂತದಲ್ಲಿ ಒಂದು ಅಭಿಯಾನದ ರೂಪದಲ್ಲಿ ಮಾಹಿತಿಯನ್ನು ನೀಡುವುದಾಗಿದೆ.

ಇಂದು ಸಾಕಷ್ಟು ಗ್ರಾಮ ಪಂಚಾಯತಿಯಲ್ಲಿ 'ರೋಜಗಾರ್ ದಿವಸ್'ನ್ನು ನಡೆಸಲಾಗುತ್ತಿದ್ದು, ಇದರಿಂದ ಜನಗಳಲ್ಲಿ ಯೋಜನೆಯ ಬಗ್ಗೆ ಒಂದು ಹಂತದಲ್ಲಿ ಮಾಹಿತಿ ದೊರೆತಿದೆ. ಗ್ರಾಮಸ್ಥರು

ಅಭಿವೃದ್ಧಿಯ ಬಗ್ಗೆ ಅವರೆ ಮಾತನಾಡಲು ಪ್ರಾರಂಭಿಸಿದ್ದಾರೆ. ಕೆಲಸಕ್ಕೆ ಬೇಡಿಕೆಯನ್ನು ವ್ಯಕ್ತಿಗತವಾಗಿ ಹಾಗೂ ಗುಂಪಾಗಿ ಸಲ್ಲಿಸಲು ಮುಂದಾಗಿದ್ದಾರೆ. ಸ್ವಸಹಾಯ ಮತ್ತು ಸ್ತ್ರೀ ಶಕ್ತಿ ಸಂಘಟನೆಗಳ ಮಹಿಳಾ ಸದಸ್ಯರುಗಳು ಈ ಯೋಜನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಪಂದಿಸುತ್ತಿದ್ದಾರೆ. ಯೋಜನೆಯಲ್ಲಿ ಕೆಲಸಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಕಾರ್ಮಿಕರಾಗಿ ಸಕ್ರೀಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರೆ ಇಲ್ಲಿ ಕೂಲಿಕಾರ್ಮಿಕರಾಗಿ ಕೆಲಸವನ್ನು ನಿರ್ವಹಿಸುವ ಮೂಲಕ ಯೋಜನೆಯ ಫಲಾನುಭವಿ ಗಳಾಗಿದ್ದಾರೆ.

ಗ್ರಾಮ ಪಂಚಾಯತಿಯಲ್ಲಿ ಇಂದು 'ರೋಜಗಾರ್ ದಿವಸ್' ಹಾಗೂ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ)ಯಂತಹ ಕಾರ್ಯಕ್ರಮಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಅವರು ಯೋಜನೆಯ ಬಗ್ಗೆ ಅದರ ಸೌಲಭ್ಯದ ಬಗ್ಗೆ ಕೂಲಿ



ವಿಳಂಬದ ಬಗ್ಗೆ ಮಾತನಾಡತೊಡಗಿದ್ದಾರೆ. ಯೋಜನೆಯ ಕಾಮಗಾರಿಯ ಸಾಧಕ–ಬಾಧಕದ ಬಗ್ಗೆ ಚರ್ಚಿಸುತ್ತಿದ್ದಾರೆ. ಕೆಲಸಕ್ಕೆ ಬೇಡಿಕೆಯನ್ನು ತಮ್ಮ ತಮ್ಮ ಸ್ವಸಹಾಯ ಸಂಘಗಳ ಮೂಲಕ ಸಂಘಟಿತರಾಗಿ ಪರಸ್ಪರ ಒಬ್ಬರಿಗೊಬ್ಬರು ಸ್ಪಂದಿಸುವ ಮೂಲಕ ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿರುವದು ನಿಜಕ್ಕೂ ಇದು ಒಂದು ಗುಣಾತ್ಮವಾದ ಬೆಳವಣಿಗೆಯಾಗಿದೆ ಎಂದರೆ ತಪ್ಪಾಗಲಾರದು.



**'ರೋಜಗಾರ್ ದಿವಸ್' ಉದ್ದೇಶ :**

- ಯೋಜನೆಯಡಿ ಕೂಲಿ/ಉದ್ಯೋಗ ಅವಕಾಶಗಳ ಬಗ್ಗೆ ಜನ ಸಮುದಾಯಗಳಲ್ಲಿ ಅರಿವು ಮೂಡಿಸುವುದು.
- ದೈಹಿಕವಾಗಿ ದುರ್ಬಲರಾದವರು, ಗುರುತಿಸಲ್ಪಟ್ಟ/ವಿಮೋಚಿತ ಸ್ವಚ್ಛತಾ ಕೆಲಸಗಾರರು ದುರ್ಬಲ ವರ್ಗದವರ ಅಗತ್ಯತೆಗಳಿಗೆ ಸ್ಪಂದಿಸುವುದು.
- ಹೊಸ ಕುಟುಂಬಗಳು ವಯಸ್ಕ ಸದಸ್ಯರು, ಉದ್ಯೋಗ ಚೀಟಿ ನೋಂದಾಯಿಸಿಕೊಳ್ಳುವ ಕಾರ್ಯಪ್ರಕ್ರಿಯೆಗೆ ಅನುವು ಮಾಡುವುದು
- ಆಸಕ್ತಿಯಿರುವ ಕುಟುಂಬಗಳಿಂದ ಕೆಲಸಕ್ಕಾಗಿ ಅರ್ಜಿಗಳನ್ನು ಸ್ವೀಕರಿಸುವದು ಮತ್ತು ಅವರಿಗೆ ಸ್ಥಳದಲ್ಲಿಯೇ ದಿನಾಂಕ ನಮೂದಿಸಿದ ಸ್ವೀಕೃತಿ ನೀಡುವುದು.
- ಆಯಾ ಪ್ರದೇಶದಲ್ಲಿ ಲಭ್ಯವಾಗುವ ಕಾಮಗಾರಿಗಳು ಹಾಗೂ ಅದರ ಕಾರ್ಯ ನಿರ್ವಹಣೆ ಬಗ್ಗೆ ಚರ್ಚಿಸುವುದು.



- ಕುಂದುಕೊರತೆ ದೂರುಗಳನ್ನು ದಾಖಲಿಸಿ ಕೊಂಡು ಅವುಗಳ ನಿವಾರಣೆಗಾಗಿ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಸಲ್ಲಿಸುವುದು
- ಯೋಜನೆಯ ಪರಿಣಾಮಕಾರಿ ಅನುಷ್ಠಾನದ ನಿಟ್ಟಿನಲ್ಲಿ ಉದ್ಯೋಗ ಚೀಟಿ ಹೊಂದಿರುವವರ ಅವಶ್ಯಕತೆಗಳಿಗೆ ಸ್ಪಂದಿಸುವುದು.
- ಕೂಲಿ ಹಣ ಸಂದಾಯದ ಸಮಸ್ಯೆಗಳ ಬಗ್ಗೆ ಚರ್ಚಿಸುವುದು ಹಾಗೂ ನಿರ್ಧರಿಸುವುದು.



ಈ ಮೇಲಿನ ಅಂಶಗಳನ್ನು ಸರ್ಕಾರವು ತನ್ನ ಯೋಜನಾ ನಿಯಮಾವಳಿಯಲ್ಲಿ ಸೇರಿಸುವ ಮೂಲಕ ಸರ್ಕಾರ ತನ್ನ ಆಡಳಿತ ಯಂತ್ರದ ಜೊತೆಗೆ ಸಮುದಾಯದ ಪಾಲ್ಗೊಳ್ಳುವಿಕೆಯನ್ನು 'ರೋಜಗಾರ್ ದಿವಸ್'ದ ಮೂಲಕ ಖಾತ್ರಿಪಡಿಸುವಂತಾಗಿದೆ. ಇದರಿಂದ ಯೋಜನೆಯಲ್ಲಿ ಸಮುದಾಯದ ಭಾಗವಹಿಸುವಿಕೆ, ಗ್ರಾಮ ಸಭೆಯಲ್ಲಿ ಕ್ರಿಯಾ ಯೋಜನೆಯ ತಯಾರಿಕೆಯಲ್ಲಿ ಗ್ರಾಮದ ಬೇಕು ಬೇಡಗಳು ಹಾಗೂ ಆದ್ಯತೆಯ ನಿರ್ಧಾರದ ಹೊಣೆಗಾರಿಕೆಯನ್ನು ಸಮುದಾಯಕ್ಕೆ ನೀಡುವ ಮೂಲಕ ಎಲ್ಲರ "ಭಾಗಿದಾರಿಕೆ"ಗೆ ಇಲ್ಲಿ ಹೆಚ್ಚಿನ ಮಹತ್ವನ್ನು ನೀಡಿದೆ. ಈ ಮೂಲಕ ಗ್ರಾಮೀಣ ಭಾಗದಲ್ಲಿ ವೈಯಕ್ತಿಕ ಮತ್ತು ಸಮುದಾಯದ ಆಸ್ತಿಯನ್ನು ಸೃಜಿಸುವ ಮೂಲಕ ಗ್ರಾಮೀಣ ಬಡ ಜನರ ಜೀವನೋಪಾಯದ ಮೂಲಗಳನ್ನು ಬಲಪಡಿಸು ವುದಾಗಿದೆ.

ಲೇಖನ

# ಗ್ರಾಮಗಳ ಗುಣಾತ್ಮಕ ಬದಲಾವಣೆಯತ್ತ ಕರ್ನಾಟಕ



ಎಲ್.ಎಸ್. ದಿನೇಶ

ನಗರ ಪ್ರದೇಶಗಳಂತೆ ಗ್ರಾಮೀಣ ಪ್ರದೇಶ ಗಳಲ್ಲಿ ಎಲ್ಲಾ ಕಾಲದಲ್ಲಿ ಸಂಚರಿಸಲು ಯೋಗ್ಯವಾದ ರಸ್ತೆಗಳನ್ನು ನಿರ್ಮಿಸಿಕೊಳ್ಳ ಬೇಕಾಗಿರುತ್ತದೆ.

ಗ್ರಾಮಗಳ ಉದ್ಧಾರ – ದೇಶದ ಉದ್ಧಾರ. ಗ್ರಾಮಗಳನ್ನು ಅಭಿವೃದ್ಧಿ ಪಡಿಸುವುದರಿಂದ ದೇಶವನ್ನು ಅಭಿವೃದ್ಧಿಪಡಿಸುವುದು ಸುಲಭ. ಅದರಂತೆ ಭಾರತವು ಜಗತ್ತಿನ ಒಂದು ಉಪಖಂಡ ದೇಶ. ಈ ಉಪಖಂಡ ದೇಶವು ಪ್ರಸ್ತುತ 29 ರಾಜ್ಯಗಳನ್ನು ಹೊಂದಿದೆ. ಇಡೀ ಭಾರತದಲ್ಲಿಯೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸದೃಢ



ಮತ್ತು ಬಲಿಷ್ಠವಾಗಿ ಜಾರಿಗೊಳಿಸುವಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಅದೇ ರೀತಿಯಾಗಿ ಭೌಗೋಳಿಕ ವಿಸ್ತೀರ್ಣದಲ್ಲಿ ದಕ್ಷಿಣ ಭಾರತದಲ್ಲಿ ಅತಿದೊಡ್ಡ ರಾಜ್ಯವು ಸಹ ಕರ್ನಾಟಕ. 2011 ರ ಜನಗಣತಿಯ ಪ್ರಕಾರ ಕರ್ನಾಟಕದ ಜನಸಂಖ್ಯೆ 6,11,30,704. ಇದರಲ್ಲಿ ಗ್ರಾಮೀಣ ಪ್ರದೇಶವು ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಕರ್ನಾಟಕದಲ್ಲಿ ಗ್ರಾಮಗಳ ಅಭಿವೃದ್ಧಿಪಡಿಸುವುದು ಅವಶ್ಯಕವಾಗಿದ್ದು, ಸಂವಿಧಾನದ 73ನೇ ತಿದ್ದುಪಡಿ ಕಾಯಿದೆ –1993 ರ "ಅಧಿಕಾರ ವಿಕೇಂದ್ರೀಕರಣ"ದ ತತ್ವದಂತೆ ಕರ್ನಾಟಕ ರಾಜ್ಯವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಿಸಿದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವಲ್ಲಿ "ಪ್ರಗತಿಯ ಮೈಲಿಗಲ್ಲನ್ನು" ಮುಟ್ಟುತ್ತಿದೆ.

ಕೆ. ಲಕ್ಕಿಹಳ್ಳಿ, ಕೊನೇಹಳ್ಳಿ (ಅಂಚೆ), ತಿಪಟೂರು (ತಾ), ತುಮಕೂರು (ಜಿಲ್ಲೆ)

## ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯಗಳು

**ಆರೋಗ್ಯ ಮತ್ತು ನೈರ್ಮಲ್ಯ:** ಗ್ರಾಮೀಣ ಪ್ರದೇಶಗಳಲ್ಲಿ ಅತೀ ಹೆಚ್ಚಿನದಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಅವಶ್ಯಕವಾಗಿದೆ. ಆ ನಿಟ್ಟಿನಲ್ಲಿ ಪ್ರಮುಖವಾಗಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಗ್ರಾಮಗಳ ಸರ್ವಾಂಗೀಣ ಪ್ರಗತಿಗೆ ನಾಂದಿ ಯಾಗುತ್ತದೆ. ಅದರಂತೆ ಗ್ರಾಮಗಳಿಗೆ ಒದಗಿಸಬಹುದಾದ ಪ್ರಮುಖ ಮೂಲಭೂತ ಸೌಲಭ್ಯಗಳ ಪಟ್ಟಿಯಲ್ಲಿ ಈ ಕೆಳಗಿನವುಗಳು ಮುಂಚೂಣಿಯಲ್ಲಿರುತ್ತವೆ.

1) ಕುಡಿಯುವ ನೀರು.

2) ಆರೋಗ್ಯ ಮತ್ತು ನೈರ್ಮಲ್ಯ.

3) ಸರ್ವ ಋತು ಸಂಪರ್ಕ ರಸ್ತೆ.

4) ಶೌಚಾಲಯ

### ಕುಡಿಯುವ ನೀರು :



ಗ್ರಾಮೀಣ ಪ್ರದೇಶದ ಗ್ರಾಮಗಳಲ್ಲಿ ಮೂಲಭೂತವಾಗಿ ಪ್ರತಿಯೊಂದು ಚಿಕ್ಕ ಮತ್ತು ದೊಡ್ಡ ಜನವಸತಿ ಪ್ರದೇಶಗಳನ್ನು ಹೊಂದಿರುವ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಾಗಿರುವುದು ಅಗತ್ಯವಾಗಿದೆ. ಆ ದೃಷ್ಟಿಯಲ್ಲಿ ಗ್ರಾಮಗಳಲ್ಲಿ ಕೊಳವೆಬಾವಿ ಕೊರೆಸುವುದು, ಮಿನಿ ವಾಟರ್ ಟ್ಯಾಂಕುಗಳನ್ನು ನಿರ್ಮಿಸುವುದು ಮತ್ತು ಅವುಗಳಿಗೆ ನಲ್ಲಿಗಳನ್ನು ಅಳವಡಿಸುವುದು ಮತ್ತು ಬಾವಿಗಳನ್ನು ಮರುಬಳಕೆ ಮಾಡುವಂತೆ ಸ್ವಚ್ಛಗೊಳಿಸುವುದು.

### ಆರೋಗ್ಯ ಮತ್ತು ನೈರ್ಮಲ್ಯ



ಗ್ರಾಮಗಳಲ್ಲಿ ವಾಸಿಸುವ ಜನರ ಜೀವನಮಟ್ಟ ಉತ್ತಮಪಡಿಸಲು ಮತ್ತು ಸ್ವಚ್ಛ, ಶುದ್ಧ, ಸುಂದರ ಬದುಕನ್ನು ನಡೆಸಲು ಗ್ರಾಮೀಣ ಜನರಿಗೆ ಉತ್ತಮ ಆರೋಗ್ಯ ಮತ್ತು ತಾವು ವಾಸಿಸುವ ಸುತ್ತ-ಮುತ್ತಲ ಪ್ರದೇಶದಲ್ಲಿ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು ಅಗತ್ಯವಾಗಿದೆ. ಆ ನಿಟ್ಟಿನಲ್ಲಿ ಗ್ರಾಮಗಳಲ್ಲಿ ಯಾವುದೇ ಸಾಂಕ್ರಾಮಿಕ ರೋಗಗಳಾದ ಕಾಲರಾ, ಶೀತ, ನೆಗಡಿ ಮತ್ತು ಮಾರಣಾಂತಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆಯಾಗಿ ಆಯಾ ಗ್ರಾಮಗಳಿಗೆ ಸಂಬಂಧಿಸಿದ ಗ್ರಾಮ ಪಂಚಾಯಿತಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆಯಾ ಗ್ರಾಮಗಳಲ್ಲಿ ವಾಸಿಸುವ ಜನರು ಮುನ್ನೆಚ್ಚರಿಕೆಯಾಗಿ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

### ಸರ್ವ ಋತು ಸಂಪರ್ಕ ರಸ್ತೆಗಳು

ನಗರ ಪ್ರದೇಶಗಳಂತೆ ಗ್ರಾಮೀಣ ಪ್ರದೇಶಗಳಲ್ಲಿ ಸರ್ವ ಋತು ಸಂಪರ್ಕ ರಸ್ತೆ ಅಂದರೆ ವರ್ಷದ




ಎಲ್ಲಾ ಕಾಲದಲ್ಲಿ ಸಂಚರಿಸಲು ಯೋಗ್ಯವಾದ ರಸ್ತೆಗಳನ್ನು ನಿರ್ಮಿಸಿಕೊಳ್ಳಬೇಕಾಗಿರುತ್ತದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ, ಮಳೆಗಾಲದಲ್ಲಿ ರಸ್ತೆಗಳು ತುಂಬಾ ಹದಗೆಟ್ಟಿರುತ್ತವೆ ಹಾಗೂ ಸಂಚರಿಸಲು ಯೋಗ್ಯವಾಗಿರುವುದಿಲ್ಲ. ಅದಕ್ಕಾಗಿ ಸಿ.ಸಿ. ರಸ್ತೆ ಅಂದರೆ ಸಿಮೆಂಟ್ ಕಾಂಕ್ರೀಟ್ ರಸ್ತೆ, ಜಲ್ಲಿಕಲ್ಲಿನ ರಸ್ತೆ, ಡಾಂಬರು ರಸ್ತೆಗಳನ್ನು ನಿರ್ಮಿಸಿಕೊಳ್ಳಬೇಕಾಗಿರುತ್ತದೆ.

## ಶೌಚಾಲಯಗಳು



ಗ್ರಾಮೀಣ ಪ್ರದೇಶಗಳ ಗ್ರಾಮಗಳಲ್ಲಿ ಉತ್ತಮ ಆರೋಗ್ಯ ಮತ್ತು ನೈರ್ಮಲ್ಯತೆಯನ್ನು ಕಾಪಾಡಲು ಹಾಗೂ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವಲ್ಲಿ ಎಲ್ಲಕ್ಕಿಂತ ಮಿಗಿಲಾಗಿ ಜನವಸತಿ ಪ್ರದೇಶದ ಸುತ್ತ–ಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಶೌಚಾಲಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಬಯಲು ಮಲ ಮೂತ್ರ ವಿಸರ್ಜನೆಗೆ ಮುಕ್ತಿ ನೀಡಲು ಶೌಚಾಲಯಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸಿಕೊಳ್ಳಬೇಕಾಗಿರುವುದು ಅಗತ್ಯವಾಗಿದೆ. ಅದರಂತೆ ಆಯಾ ಗ್ರಾಮಗಳ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ, ಶೌಚಾಲಯ ನಿರ್ಮಿಸಿಕೊಳ್ಳುವುದರ ಬಗ್ಗೆ ಮಾಹಿತಿ ಮತ್ತು ಸರ್ಕಾರದ ಸಹಾಯಧನದ ಪ್ರೋತ್ಸಾಹವನ್ನು ಪಡೆದುಕೊಂಡು ಗ್ರಾಮಗಳಲ್ಲಿ ಸ್ವಚ್ಛ, ಶುದ್ಧ, ಸುಂದರ ಪರಿಸರವನ್ನು ಸೃಷ್ಟಿ ಮಾಡಬಹುದು.

ಗ್ರಾಮೀಣ ಪ್ರದೇಶಗಳು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುವುದು ಅಗತ್ಯವಿರುವಷ್ಟೆ ಸಾಮಾಜಿಕವಾಗಿ ಅಂದರೆ ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯವಸ್ಥೆ ಮಾಡಿರುವುದು ನಿಜಕ್ಕೂ ಗ್ರಾಮಗಳಲ್ಲಿ ಗುಣಾತ್ಮಕ ಬದಲಾವಣೆಯನ್ನು ಕಾಣಬಹುದು. ಈ ಮೇಲಿನ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಪಡೆಯಲು ಗ್ರಾಮೀಣ ಪ್ರದೇಶದ ಜನರು ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೌಲಭ್ಯ ಪಡೆದುಕೊಳ್ಳುವುದರ ಮೂಲಕ ಭವಿಷ್ಯದಲ್ಲಿ ಮುಂದಿನ ಪೀಳಿಗೆಗೆ ಕರ್ನಾಟಕದಲ್ಲಿ ಗ್ರಾಮಗಳನ್ನು ಸರ್ವಾಂಗೀಣ ಪ್ರಗತಿಯತ್ತ ಕರೆದೊಯ್ಯಲು ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ಗ್ರಾಮೀಣ ಪ್ರದೇಶದ ನಾಗರೀಕರು ಸಹಕರಿಸಬೇಕಾಗಿರುವುದು ಅಗತ್ಯವಾಗಿದೆ.




# ಸಾಮಾಜಿಕ ವಿನ್ಯಾಸ ಮತ್ತು ಆರ್ಥಿಕ ಅಸಮಾನತೆ



ಪ್ರೊ. ಎ. ಎಚ್. ಮಾಸಾಪತಿ

ದಾರಿದ್ರ್ಯ ಮತ್ತು ಸಾಮಾಜಿಕ ವಿನ್ಯಾಸದ ನಡುವೆ ನಿಕಟವಾದ ಪರಸ್ಪರ ಸಂಬಂಧವಿದೆ. ವಿಶಿಷ್ಟವಾಗಿ ಗ್ರಾಮೀಣ ಭಾರತದಲ್ಲಿ ಜಾತಿ ಆಧಾರಿತವಾದ ಉದ್ಯೋಗಗಳ ಸಾಮಾಜಿಕ ಶ್ರೇಣೀಕರಣ (Social Stratification) ಮುಂದುವರೆದಿದೆ. ಕೊಳಚೆ ಪ್ರದೇಶಗಳಲ್ಲಿ ವಾಸಿಸುವಂತಹ ವಯೋವೃದ್ಧ ಬಡವರ ಸ್ಥಿತಿ/ಗತಿಯನ್ನು ಕುರಿತು ಅಧ್ಯಯನಗಳನ್ನು ನಡೆಸಲಾಗುತ್ತದೆ. ಇಂತಹ ಪ್ರದೇಶಗಳಲ್ಲಿ ಜೀವಿಸುವಂತಹ ವೃದ್ಧರ ಜನಸಂಖ್ಯೆಯು ಬೆಳೆದಿರುವುದರ ಜೊತೆಗೆ, ಅವರು ಇತರ ಕಾರಣಗಳ ದೆಸೆಯಿಂದ ಗಂಡಾಂತರದಲ್ಲಿ ಸಿಲುಕಿದ್ದಾರೆ.




ಸಮಾಜ ಕಲ್ಯಾಣ ಹಾಗೂ ಸಾಮಾಜಿಕ ಭದ್ರತೆಯ ಕ್ರಮಗಳು ವ್ಯಾಪಾರೀಕರಣ ಹೊಂದಿರುವುದರಿಂದ ಅನಪೇಕ್ಷಿತ ಪರಿಣಾಮಗಳು ಉದ್ಭವಿಸಿವೆ.

ಬಡ ವಯಸ್ಕರು ಸೇವಾ ಕ್ಷೇತ್ರಗಳಲ್ಲಿ ಉದ್ಯೋಗಕ್ಕಾಗಿ ಅಲೆದಾಟ ಮಾಡುತ್ತಾರೆ. ಬಡವರ ಶ್ರಮಶಕ್ತಿಯ ಪೂರೈಕೆಯಲ್ಲಿ ಉಂಟಾಗಿರುವ ಹಣಕಾಸಿನ ಹೆಚ್ಚಳವು, ಅವರ ದಿನಗೂಲಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಧಿಕ ಹಣಕಾಸಿನ ಅಗತ್ಯವಿರುವುದರಿಂದ, ಬಡವರು ಶ್ರಮದ ಮಾರುಕಟ್ಟೆಗಳಿಗೆ ಎಳೆಯ ವಯಸ್ಸಿನ ಮಕ್ಕಳನ್ನು ಹೆಚ್ಚಿನ ಪ್ರಮಾಣದಲ್ಲಿ ಕಳುಹಿಸುತ್ತಾರೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಬಾಲಕ / ಬಾಲಕಿಯರು ಆರಂಭಿಕ ಶಿಕ್ಷಣದಿಂದ ವಂಚಿತರಾಗುತ್ತಾರೆ. ಅಧಿಕ ವರಮಾನ, ಆಸ್ತಿ ಹಾಗೂ ಸುಖ ಜೀವನದ ಕನಸು ಕಾಣುತ್ತ ಬಡವರು ಜೀವಿಸಬೇಕಾಗುತ್ತದೆ.

ಶಿಕ್ಷಣ ಮತ್ತು ಗ್ರಾಮೀಣ ದಾರಿದ್ರ್ಯದ ನಡುವಿನ ಸಂಬಂಧವು ಸಂಕೀರ್ಣವಾಗಿದೆಯೆಂಬ ಸಂಗತಿಯು ಬಹಿರಂಗವಾಗಿದೆ. ಮೂಲಸೌಕರ್ಯ ಗಳ ಅಭಾವ ಹಾಗೂ ಸಾಮಾಜಿಕ ನಿರ್ಬಂಧನೆಗಳ ದೆಸೆಯಿಂದ ಹಿಂದುಳಿದ

ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರೋಡ್, ಸುಲ್ತಾನ್‌ಪಾಳ್ಯ, ಭೆಂಗಳೂರು - 560 032



ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣ ಪಡೆಯಲು ಸಾಧ್ಯವಾಗುವುದಿಲ್ಲ. ಲಾಭದಾಯಕ ಉದ್ಯೋಗದ ಅಭಾವ ಹಾಗೂ ಸೂಕ್ತವಾದ ಆರ್ಥಿಕ ಸೌಲಭ್ಯದ ಕೊರತೆಯಿಂದ ದಾರಿದ್ರ್ಯದಲ್ಲಿ ಸಿಲುಕಿದ ಗ್ರಾಮೀಣ ಜನರು ಶಿಕ್ಷಣಕ್ಕಾಗಿ ಹಣಕಾಸು ಪೂರೈಸಲು ಅಸಮರ್ಥರಾಗುವುದರಿಂದ ಐದನೆಯ ತರಗತಿಯ ನಂತರ ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಅಪೇಕ್ಷಿಸುವುದಿಲ್ಲ. ಶ್ರೀಮಂತರ ಮಕ್ಕಳು ದುಬಾರಿ ವೆಚ್ಚದ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಅಧ್ಯಯನ ಮಾಡುವ ಅವಕಾಶ ಹೊಂದಿದರೆ ಬಡವರ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ಪಡೆಯುತ್ತಾರೆ. ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಆರೋಗ್ಯ ಕೇಂದ್ರಗಳು ದುರ್ಬಲ ಸಮುದಾಯಗಳ ಆಶಾಕಿರಣಗಳಾಗಿವೆ.

ಇತ್ತೀಚೆಗಿನ ವರ್ಷಗಳಲ್ಲಿ ಸಮಾಜ ಕಲ್ಯಾಣ ಹಾಗೂ ಸಾಮಾಜಿಕ ಭದ್ರತೆಯ ಕ್ರಮಗಳು ವ್ಯಾಪಾರೀಕರಣ ಹೊಂದಿರುವುದರಿಂದ ಅನಪೇಕ್ಷಿತ ಮತ್ತು ಅಪಾಯಕಾರಿ ಪರಿಣಾಮಗಳು ಉದ್ಭವಿಸಿವೆ. ಮಾರುಕಟ್ಟೆ ಮತ್ತು ವ್ಯಾಪಾರೀಕರಣ ಆಧಾರಿತ ನೂತನ ಉದಾರವಾದಿ ಧೋರಣೆಗಳನ್ನು ಅನುಸರಿಸುವುದರಿಂದ ಉದ್ಭವಿಸುವಂತಹ ಅನಿಷ್ಟಗಳ ಮೇಲೆ ಆಕ್ರಮಣ ಮಾಡಲಾಗುತ್ತದೆ.

**ದಾರಿದ್ರ್ಯದ ಪರಿಶೀಲನೆ :**

ವ್ಯಾಪಕ ಸ್ವರೂಪ ಹೊಂದಿರುವ ದಾರಿದ್ರ್ಯದ ದೆಸೆಯಿಂದ ಮಾನವನ ಮನಸ್ಸು ವಿಚಲಿತವಾಗುತ್ತದೆ. ದ್ವಿತೀಯ ಜಾಗತಿಕ ಯುದ್ಧದ ನಂತರದ ವರ್ಷಗಳಲ್ಲಿ ಅಭಿವೃದ್ಧಿಪರ ಅರ್ಥಶಾಸ್ತ್ರವು ಗೌರವಾನ್ವಿತ ಸ್ಥಾನವನ್ನು ಸಂಪಾದಿಸಿದಾಗ ಹಲವಾರು ತಜ್ಞರು ಅಂತರ ಶಿಸ್ತಿನ ಮಾರ್ಗವನ್ನು ಅನುಸರಿಸಿ ದಾರಿದ್ರ್ಯ ಸಂಬಂಧಿತ ವಿವಾದಾಂಶಗಳನ್ನು ವಿಶ್ಲೇಷಿಸಿ, ಪರಿಹಾರಾತ್ಮಕ ಧೋರಣೆಗಳನ್ನು ಸೂಚಿಸುವ ಕಾರ್ಯಗಳಲ್ಲಿ ನಿರತರಾದರು.

ಗುನಾರ್ ಮಿರ್ಡಾಲ್‌ರ 'ಏಶಿಯಾದ ನಾಟಕ : ರಾಷ್ಟ್ರಗಳ ಮಾರ್ಗದಲ್ಲಿ ದಾರಿದ್ರ್ಯದ ಪರಿಶೀಲನೆ (1968)' ಎಂಬ ಕೃತಿಯಲ್ಲಿ ಅನುಸರಿಸಿದ ಸಾಂಸ್ಥಿಕ ಮಾರ್ಗದಲ್ಲಿ ದಾರಿದ್ರ್ಯದ ಸಮಸ್ಯೆಗಳನ್ನು ಕುರಿತು ಪ್ರತ್ಯೇಕವಾಗಿ ಪರಿಶೀಲಿಸಿರುವುದಿಲ್ಲ. ಆದರೆ ಜಾತಿಗಳ ಶ್ರೇಣೀಕರಣ, ಅವುಗಳ ಪರಸ್ಪರ ಸಂಬಂಧಗಳಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಬಡರಾಷ್ಟ್ರಗಳ ಮೇಲೆ ಒತ್ತಾಯಪೂರ್ವಕವಾಗಿ ಹೇರಿದಂತಹ ಜಾಗತಿಕ ವಿನ್ಯಾಸ ಹೊಂದಾಣಿಕೆಯ (Structural Adjustment) ಕಾರ್ಯಕ್ರಮಗಳು, ವ್ಯಾಪಕವಾದ ಸಾಮಾಜಿಕ / ಆರ್ಥಿಕ ವಿನ್ಯಾಸಗೊಳಿಸುವಿಕೆಯೊಂದಿಗೆ ಯಾವುದೇ ಸಂಬಂಧ ಹೊಂದಿರುವಂತೆ ಕಾಣುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಸ್ವಾಮ್ಯದ ಸಾರಾಯಿ ಅಂಗಡಿಗಳಿಗೆ ಉತ್ತೇಜನ ನೀಡುವುದರಿಂದ ಸಾಮಾಜಿಕ ಗಾಯ / ಮಾನನಷ್ಟದ ಮೇಲೆ ರಾಜಕೀಯ ಉಪ್ಪು (Political Salt) ತಿಕ್ಕಿದಂತಾಗುತ್ತದೆ. ಕರಸಂಗ್ರಹಣೆಯ ಹಣಕಾಸಿನಿಂದ ಸಾರ್ವಜನಿಕ ಕ್ರೀಡಾ ವೀಕ್ಷಣೆಗೆ ಉಚಿತ ಪ್ರವೇಶದ ಚೀಟಿಗಳನ್ನು ನೀಡುವುದರಿಂದ, ಬಡವರು ದೈನಂದಿನ ದುಡಿಮೆಯಿಂದ ವಂಚಿತರಾಗಿ ವಿಪರೀತವಾದ ಸಾಲದ ಭಾರದಿಂದ ದಾರಿದ್ರ್ಯದ ಕಂದಕದಲ್ಲಿ ಪತನವಾಗುತ್ತಾರೆ.

ಬಡವರ ಬಗೆಗಿನ ಉದ್ದೇಶಿತ ಕಾರ್ಯಕ್ರಮಗಳ ಮೂಲಕ ಅವರು ಹೋರಾಟ ನಡೆಸಬಹುದಾಗಿದೆ. ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯು ಮಂದಗತಿಯಿಂದ ಸಾಗಿರುವುದರಿಂದ ರಾಷ್ಟ್ರವು ಹೆಚ್ಚಿನ ಪ್ರಗತಿಗಾಗಿ ಅತಿದೂರದ ದಾರಿಯನ್ನು ಕ್ರಮಿಸಬೇಕಾಗುತ್ತದೆ.

**ಸಂಶೋಧನೆಯ ವಿಸ್ತರಣೆ:**

ಮತದಾನ ಆಧಾರಿತವಾದ ಪ್ರಜಾಸತ್ತಾತ್ಮಕ



ವ್ಯವಸ್ಥೆಯು ಬಡವರ ಶಕ್ತಿ / ಪ್ರಾಬಲ್ಯವನ್ನು ಹೆಚ್ಚಿಸಿದೆ ಯೆಂಬ ದೃಷ್ಟಿಕೋನವು ಸಂದೇಹಾತ್ಮಕವಾಗಿದೆ. ಭಾರತದಲ್ಲಿ ಔಪಚಾರಿಕ ಪ್ರಜಾಪ್ರಭುತ್ವದ ಸ್ಥಾಪನೆಯು ಜಾತಿ ಹಾಗೂ ವರ್ಗಗಳ ಮೇಲೆ ಆಧಾರಿತವಾದ ರಕ್ಷಣಾತ್ಮಕ ಜಾಲತಾಣಗಳನ್ನು ಅವಲಂಬಿಸಿದೆಯೆಂಬ ವಿಚಾರದಲ್ಲಿ ಕೆಲವರು ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಇಂತಹ ಜಾಲತಾಣಗಳು ನಿಜವಾದ ಪ್ರಜಾಸತ್ತಾತ್ಮೀ ಕರಣವನ್ನು ವಿರೋಧಿಸುತ್ತವೆ. ಅಭಿವೃದ್ಧಿಪರ ಕಾರ್ಯಕ್ರಮಗಳಲ್ಲಿ ಬಡವರನ್ನು ಸೇರ್ಪಡೆ ಮಾಡಿ ಕೊಳ್ಳುವಂತಹ ಪ್ರಕಟಣೆಯನ್ನು ನೀಡಲಾಗಿದ್ದರೂ ಸಹ ಅವರನ್ನು ನಿರ್ಲಕ್ಷಿಸಲಾಗಿದೆ.

ಕೆಲವು ಅರ್ಥಶಾಸ್ತ್ರಜ್ಞರು ದಾರಿದ್ರ್ಯದ ಮಾಪನ, ಮಾದರಿ ಹಾಗೂ ನಿರ್ಣಯಾತ್ಮಕ ಅಂಶಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. 2010ರಿಂದ 2015ರ ಮಾಹಿತಿಯ ಪ್ರಕಾರ ಆರ್ಥಿಕಾಭಿವೃದ್ಧಿಯು ದಾರಿದ್ರ್ಯದ ಉಪಶಮನಕ್ಕಾಗಿ ಗಮನಾರ್ಹವಾದ ಕೊಡುಗೆ ನೀಡಿರುವುದಿಲ್ಲವೆಂಬ ಸಂಗತಿಯು ಸ್ಪಷ್ಟವಾಗಿದೆ. ಕೃಷಿರಂಗದಲ್ಲಿ ಗತಿವಿಹೀನತೆಯು ಕಂಡು ಬಂದಿದೆ. ಆದಿವಾಸಿಗಳು, ಅರಣ್ಯನಿವಾಸಿಗಳು, ಗುಡ್ಡಗಾಡು ಜನರು, ಕಡುಬಡವರು ಮತ್ತು ದುರ್ಬಲ ಸಮುದಾಯಗಳ ಜನರು ಬೇಸಾಯ ಕ್ಷೇತ್ರದಲ್ಲಿ ಶ್ರಮಜೀವಿಗಳಾಗಿ ಬದುಕುತ್ತಿದ್ದಾರೆ. ಇಂತಹ ವರ್ಗಗಳು ಅತ್ಯಧಿಕ ದಾರಿದ್ರ್ಯದ ಒತ್ತಡದಲ್ಲಿ ಸಿಲುಕಿವೆ.

ಹೊಸ ಸಂಶೋಧಕರು ಅಭಿವೃದ್ಧಿ ಹಾಗೂ ದಾರಿದ್ರ್ಯದ ಬಗೆಗಿನ ವಿವಾದಾಂಶಗಳಿಗೆ ಅಂತರಶಿಸ್ತಿನ ವಿಧಾನವನ್ನು ಅನ್ವಯಿಸುವ ಪ್ರಯತ್ನ ಮಾಡುತ್ತಿದ್ದಾರೆ. ಜಾತಿ, ಸಾಮಾಜಿಕ ವಿನ್ಯಾಸ ಮತ್ತು ಸುಧಾರಣೆಯ ಹೋರಾಟದ ಹಿನ್ನೆಲೆಯಲ್ಲಿ ನಿರ್ದಿಷ್ಟವಾದ ಪ್ರದೇಶ ಹಾಗೂ ವಲಯಗಳ ಬಗೆಗೆ ಅಧ್ಯಯನ ಕೈಗೊಂಡಿದ್ದಾರೆ. ಸುಮಾರು 65 ವರ್ಷಗಳ ಯೋಜನಾಬದ್ಧವಾದ ಬೆಳವಣಿಗೆಯ ನಂತರವೂ ಸಹ ದಾರಿದ್ರ್ಯದ ಉಪಶಮನವು ಕೇವಲ 'ಭರವಸೆಯ ವಚನ' ಆಗಿ ಪರಿಣಮಿಸಿದೆ. ಸ್ವಾತಂತ್ರ್ಯೋತ್ತರ ಭಾರತದ ಪ್ರತಿಕ್ರಿಯೆ ಮತ್ತು ಪರಿವರ್ತನೆಯನ್ನು ಗುರುತಿಸಲಾಗಿದೆ. ಬಡಜನರು ರಾಜಕಾರಣಿಗಳ ಮೇಲೆ ಜನಪ್ರಿಯ ಧೋರಣೆಗಳನ್ನು ಹೇರುತ್ತಾರೆಂಬ ಮಧ್ಯಮ ವರ್ಗದ ವಿರೋಧವನ್ನು ಉಲ್ಲೇಖಿಸಲಾಗಿದೆ.

### ಆರ್ಥಿಕ ಅಸಮಾನತೆ :

ಸಮಾನತೆಯು ಆದರ್ಶವಾಗಿದೆ. ಆದರೆ ಅಸಮಾನತೆಯು ವಾಸ್ತವಿಕವಾಗಿದೆ. ಇವೆರಡರ ನಡುವೆ ಭೂಮಿ – ಆಕಾಶದ ಅಂತರವಿದೆ. ಮಾನವನ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಶಕ್ತಿಯು ವಿಭಿನ್ನವಾಗಿರುವುದರಿಂದ ಅಸಮಾನತೆಯು ಸ್ವಾಭಾವಿಕವಾಗಿದೆ. ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಅಂತರ–ರಾಷ್ಟ್ರೀಯ ಮಟ್ಟದಲ್ಲಿ ಅಸಮಾನತೆಯನ್ನು ಕಾಣಬಹುದಾಗಿದೆ. ಅಸಮಾನತೆ ಯಿಂದ ಉದ್ಭವಿಸುವಂತಹ ವೈಯಕ್ತಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ, ಇತ್ಯಾದಿ ಸಮಸ್ಯೆಗಳನ್ನು ಪರಿಹರಿಸಲು ಸಮಾನತೆಯನ್ನು ಸಮರ್ಥಿಸಲಾಗುತ್ತದೆ. ವಿಪರೀತ ಅಸಮಾನತೆಯು ಸಾಮಾಜಿಕ ಭದ್ರತೆಗೆ ಗಂಡಾಂತರಕಾರಿ ಆಗಿದೆ. ಅದು ವಿರೋಧ ಮತ್ತು ಹಿಂಸಾಚಾರವನ್ನು ಸೃಷ್ಟಿಸುತ್ತದೆ. ಇಂತಹ ಪರಿಸ್ಥಿತಿಯಿಂದ ದೀರ್ಘಕಾಲೀನ ಬೆಳವಣಿಗೆಗೆ ಅಪಾಯವಿದೆಯೆಂಬ ಸಂಗತಿಯನ್ನು ಅಂತರ ರಾಷ್ಟ್ರೀಯ ಹಣಕಾಸು ನಿಧಿಯು ಒಪ್ಪಿ ಕೊಂಡಿದೆ.

ಅಸಮಾನತೆ ಹಾಗೂ ಆದಾಯ ಹಂಚಿಕೆಯ ಬಗೆಗಿನ ಮಾಹಿತಿಗಾಗಿ ಸುದೀರ್ಘಾವಧಿಯವರೆಗೆ ಅರ್ಥಶಾಸ್ತ್ರಜ್ಞರು, ಸಂಖ್ಯಾಶಾಸ್ತ್ರಜ್ಞರನ್ನು ಅವಲಂಬಿಸ ಬೇಕಾಗಿತ್ತು. ಸಂಪತ್ತಿನ ವಿತರಣೆ, ಅಸಮಾನತೆ ಮತ್ತು ದಾರಿದ್ರ್ಯದಂತಹ ಕ್ಷೇತ್ರಗಳಲ್ಲಿ ಕೆಲವು ಸಮಕಾಲೀನ ತಜ್ಞರು ಪರಿವರ್ತನೆಯ ದಾಖಲೆಗಳನ್ನು ಸೃಷ್ಟಿಸಿದ್ದಾರೆ.

ಪ್ರೊ. ಎ.ಬಿ. ಎಟ್‌ಕಿನ್‌ಸನ್ನರ 'ಅಸಮಾನತೆ : ಏನು ಮಾಡಲು ಸಾಧ್ಯ?' ಎಂಬ ಕೃತಿಯಲ್ಲಿ ಅಸಮಾನತೆಯನ್ನು ನಿಯಂತ್ರಿಸುವ / ಆಳುವಂತಹ ವಿವಾದಾಂಶಗಳನ್ನು ವಿಶ್ಲೇಷಿಸಲಾಗಿದೆ. ಅಸಮಾನತೆಯ ಅರ್ಥವ್ಯವಸ್ಥೆ ಹಾಗೂ ತಾಂತ್ರಿಕ ಬದಲಾವಣೆಯು, ಆರ್ಥಿಕತೆಯ ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ಮುಕ್ತ ಮಾರುಕಟ್ಟೆಯಿಂದ ಹರಿದು ಬರುವಂತಹ ಪ್ರಯೋಜನಗಳ ಬಗೆಗಿನ ಸಾಂಪ್ರದಾಯಿಕ ಪಠ್ಯಗ್ರಂಥದ ದೃಷ್ಟಿಕೋನ ಮತ್ತು ಸಿದ್ಧಾಂತಗಳನ್ನು ಈ ಕೃತಿಯು ತಳ್ಳಿಹಾಕುತ್ತದೆ.

ಹಲವಾರು ಅರ್ಥಶಾಸ್ತ್ರಜ್ಞರು ಅಸಮಾನತೆಯನ್ನು ಕುರಿತು ಅನೇಕ ವರ್ಷಗಳವರೆಗೆ ಕೈಗೊಂಡಿರುವ ಅಧ್ಯಯನದ ಸಂಯೋಜನೆಯನ್ನು ನಿರೂಪಿಸಲಾಗಿದೆ. ಸಿಡ್ನಿ ವೆಬ್ ಹಾಗೂ ಲಾರ್ಡ್ ಬೆವರಿಜ್‌ರಂತಹ ಸೌಮ್ಯಸ್ವರೂಪದ ಸಮಾಜವಾದಿ ಸಂಪ್ರದಾಯವನ್ನು ಪ್ರೊ. ಎ.ಬಿ. ಎಟ್‌ಕಿನ್‌ಸನ್ ಅನುಸರಿಸಿರುವಂತೆ ಕಾಣುತ್ತದೆ. ಸಂಪೂರ್ಣವಾದ ಸಮಾನತೆಯನ್ನು ಸಮರ್ಥಿಸುವಂತಹ ಆದರ್ಶವಾದಕ್ಕೆ ಪ್ರತಿಯಾಗಿ ಕಡಿಮೆ ಅಸಮಾನತೆ ಹೊಂದಿರುವ ಜಗತ್ತನ್ನು ನಿರ್ಮಿಸಲು ಸಾಧ್ಯವೆಂಬ ಆಶಾವಾದವನ್ನು ವ್ಯಕ್ತಪಡಿಸಲಾಗಿದೆ.

## ಸಲಹೆ ಸೂಚನೆಗಳು

ಅಸಮಾನತೆಯ ಗಾತ್ರವನ್ನು ಗಣನೀಯವಾಗಿ ಕಡಿಮೆ ಮಾಡಲು ನೀಡಲಾಗಿರುವ ಹಲವಾರು ಸಲಹೆಗಳಲ್ಲಿ ಕೆಲವು ಮಹತ್ವದ ಅಂಶಗಳನ್ನು ಉಲ್ಲೇಖಿಸಲಾಗಿದೆ.

1. ಧೋರಣಾ ನಿರ್ಮಾಪಕರು ತಂತ್ರಜ್ಞಾನದ ಮಾರ್ಗವನ್ನು ಪರಿವರ್ತಿಸಲು ಲಕ್ಷ್ಯವನ್ನು ಕೇಂದ್ರೀಕರಿಸಬೇಕು. ಅದರ ಮೂಲಕವಾಗಿ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತಹ ಕಾರ್ಮಿಕರ ಸಾಮರ್ಥ್ಯ, ನೂತನ ಸಂಶೋಧನೆಯನ್ನು ಪ್ರೋತ್ಸಾಹಿಸುವಂತಾಗ ಬೇಕು ಮತ್ತು ಸೇವೆ ಸೌಲಭ್ಯದ ಮಾನವೀಯ ಆಯಾಮವನ್ನು ಖಚಿತಪಡಿಸಬೇಕು.
2. ಸರ್ಕಾರಗಳು ಕಂಪನಿಗಳ ತಾಂತ್ರಿಕ ಆಯ್ಕೆಗಳನ್ನು ಪರಿವರ್ತಿಸುವ ಮೂಲಕ ಅಸಮಾನತೆಯನ್ನು ಪರಿಹರಿಸಲು ಸಾಧ್ಯವಿದೆ. ಕಂಪನಿಗಳಿಗೆ ಕೇವಲ ಅಧಿಕ ಲಾಭ ನೀಡುವಂತಹ ಸಾಮರ್ಥ್ಯವನ್ನು ಸೃಷ್ಟಿಸುವ ಬದಲು ಜನತೆಯ ಹೆಚ್ಚಿನ ಕಲ್ಯಾಣ ಹಾಗೂ ಉದ್ಯೋಗಕ್ಕೆ ಉತ್ತೇಜನ ನೀಡುವಂತೆ ಪೈಪೋಟಿ ಧೋರಣೆಯನ್ನು ಹೊಂದಿಸಬೇಕು.
3. ಸ್ಪರ್ಧಾತ್ಮಕ ಧೋರಣೆಗಳು ಮತ್ತು ಕಾರ್ಮಿಕ ಒಕ್ಕೂಟದ ಪ್ರಾತಿನಿಧ್ಯವನ್ನು ನಿರ್ವಹಿಸುವಾಗ ಪಾಲುದಾರರಲ್ಲಿ ಸೂಕ್ತವಾದ ಅಧಿಕಾರದ ಸಮತೋಲನ ಇರಬೇಕು.
4. ಉದ್ಯೋಗ ಹಾಗೂ ವೇತನ ಧೋರಣೆಯ ಬಗೆಗಿನ ಭರವಸೆಗಳು ಅಗತ್ಯವಾಗಿದೆ.
5. ನಿರ್ದಿಷ್ಟವಾದ ಬಡ್ಡಿದರದೊಂದಿಗೆ ಕರಾರು ಪತ್ರ ಪ್ರಕಟಣೆಯ ಮೂಲಕ ಬಂಡವಾಳ ವರ್ಗಾವಣೆಗೆ ಶಿಫಾರಸ್ಸು ಮಾಡಲಾಗಿದೆ.
6. ಕೇವಲ ಪ್ರಗತಿಪರ ತೆರಿಗೆ ವಿಧಿಸುವಿಕೆಯನ್ನು ಸಮರ್ಥಿಸಿ ಸಂತೃಪ್ತಿಪಡಬಾರದು. ಅಸಮಾನತೆಯನ್ನು ಸೃಷ್ಟಿಸುವಂತಹ ಮೂಲಾಧಾರಗಳನ್ನು ಆಳವಾಗಿ ಪರಿಶೀಲಿಸಬೇಕು.
7. ಬೆಳವಣಿಗೆಯ ನಿರ್ವಹಣೆ ಮಾಡಲು ಔದ್ಯೋಗಿಕ ಪ್ರಜಾಸತ್ತಾತ್ಮಕ ವ್ಯವಸ್ಥೆಯ ದೂರದೃಷ್ಟಿಯನ್ನು ಹೊಂದಬೇಕು.

ಕಳೆದ ಅರ್ಧಶತಮಾನದಲ್ಲಿ ಔದ್ಯೋಗಿಕ ಸರ್ವಾಧಿಕಾರಿಗಳು ಮತ್ತು ಔದ್ಯೋಗಿಕ ಪ್ರಜಾಸತ್ತಾತ್ಮಕ ವಾದಿಗಳು ವೈಚಾರಿಕ ಸಮರದಲ್ಲಿ ನಿರತರಾಗಿದ್ದಾರೆ. ಉದ್ಯೋಗಪತಿಗಳು ಹಾಗೂ ಶ್ರಮಜೀವಿಗಳ ನಡುವಿನ ಸಂಘರ್ಷಣೆಯ ದೆಸೆಯಿಂದ ಆರ್ಥಿಕ ಸಮಾನತೆಯು ದೂರದ ನಕ್ಷತ್ರವೆಂಬಂತೆ ಕಾಣುತ್ತದೆ.

ಯಶೋಗಾಥೆ

# ಬಹುಕಮಾನು ತಡೆಗೋಡೆ ಕಾಮಗಾರಿಯಿಂದ ಪ್ರಯೋಜನ ಕಂಡ ದೊಡ್ಡಾಲಹಳ್ಳಿ ಗ್ರಾಮ ಪಂಚಾಯಿತಿ

– ಎನ್. ಉಮಾದೇವಿ

ಗ್ರಾಮೀಣ ಜೀವನೋಪಾಯದ ನೈಸರ್ಗಿಕ ಸಂಪತ್ತನ್ನು ವೃದ್ಧಿಸುವುದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಮುಖ ಉದ್ದೇಶ ಮತ್ತು ಗುರಿಗಳಲ್ಲೊಂದಾಗಿದೆ. ಅಂತರ್ಜಲ ಕುಸಿತದಿಂದಾಗಿ ಕೃಷಿ, ಕುಡಿಯುವ ನೀರು ಹಾಗೂ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಹಳ್ಳಕೊಳ್ಳಗಳಲ್ಲಿ ಹರಿದು ಹೋಗುವ ನೀರನ್ನು ತಡೆಹಿಡಿದು ಭೂಮಿಯಲ್ಲಿ ಇಂಗಿಸಿ ಭೂಮಿಯ ಅಂತರ್ಜಲ ಮಟ್ಟವನ್ನು



ಹೆಚ್ಚಿಸುವ ಕಾರ್ಯದ ಬಗ್ಗೆ ಗ್ರಾಮೀಣ ಭಾಗದ ಜನರಲ್ಲಿ ಅರಿವು ಮೂಡಿಸುವಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಬಹಳ ಯಶಸ್ವಿಯಾಗಿದೆ. ನೀರನ್ನು ಶೇಖರಿಸುವ, ಅಲ್ಪ ಅವಧಿಯವರೆಗೆ ಬಂಧಿಸುವ, ಹರಿವಿನ ದಿಕ್ಕು ಬದಲಿಸುವ ಎಲ್ಲ ಗುಣಗಳನ್ನು ಬಹು ಕಮಾನು ಹೊಂದಿರುವುದರಿಂದ ಇದರ ಬಗ್ಗೆ ಪ್ರಾಯೋಗಿಕವಾಗಿ ಉಪಯೋಗ ಪಡೆದುದ್ದರಿಂದ ಆರ್ಚ್ ಡ್ಯಾಂನ್ನು ಉತ್ತಮವಾದ ಚೆಕ್ ಡ್ಯಾಂ ಎಂದರೆ ತಪ್ಪಾಗಲಾರದು.

ಇದಕ್ಕೆ ಮಾರ್ಗದರ್ಶನವಾಗಿ 2014–15ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ದೊಡ್ಡಾಲಹಳ್ಳಿ ಗ್ರಾಮ ಪಂಚಾಯತಿಯ ಸರ್ಕಾರಿ ಹಳ್ಳದ ಜಮೀನಿನ ಹತ್ತಿರ ಬಹುಕಮಾನು ತಡೆಗೋಡೆಯನ್ನು

ಭೂಮಿಯ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಕಾರ್ಯದ ಬಗ್ಗೆ ಗ್ರಾಮೀಣ ಭಾಗದ ಜನರಲ್ಲಿ ಅರಿವು ಮೂಡಿಸುವಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯು ಯಶಸ್ವಿಯಾಗಿದೆ.

ಜಿಲ್ಲಾ ಐ.ಇ.ಸಿ ಸಂಯೋಜಕರು, ಎಂ.ಜಿ.ಎನ್.ಆರ್.ಇ.ಜಿ.ಎ ವಿಭಾಗ
ಜಿಲ್ಲಾ ಪಂಚಾಯತ್, ರಾಮನಗರ



ನಿರ್ಮಾಣ ಮಾಡಿ ಅದರಿಂದ ಅತಿ ಹೆಚ್ಚಿನ ಮಟ್ಟದಲ್ಲಿ ಪ್ರಯೋಜನವನ್ನು ಇಲ್ಲಿಯ ರೈತರು ಪಡೆಯುತ್ತಿದ್ದಾರೆ. ಇದಕ್ಕೆ ಮೊದಲು ಒಂದು ಹಳ್ಳ ಇದ್ದ ಜಾಗದಲ್ಲಿ ನೀರು ಸಂಗ್ರಹಗೊಳ್ಳುತ್ತಿತ್ತು.. ಈ ರೀತಿ ಸಂಗ್ರಹಗೊಂಡ ನೀರನ್ನು ಉಳಿಸುವುದ್ಕಾಗಿ ತಡೆಗೋಡೆಯನ್ನು ಸಾಂಪ್ರದಾಯಿಕವಾಗಿ ಕಲ್ಲುಗಳಿಂದ ಕಟ್ಟಲಾಗುತ್ತಿತ್ತು. ಇದರಿಂದ ಕೆಲವೊಂದು ದುಷ್ಪರಿಣಾಮಗಳು ಉಂಟಾಗುತ್ತಿದ್ದವು. ಕಲ್ಲುಗಳನ್ನು ಸೇರಿಸಿ ಸಿಮೆಂಟ್‌ನ್ನು ಬಳಸಿ ಕಟ್ಟುತ್ತಿದ್ದ ತಡೆಗೋಡೆಯಲ್ಲಿ ಮಧ್ಯೆ ಮಧ್ಯೆ ನೀರು ಸೋರಿ ಹೋಗುತ್ತಿದ್ದು, ನೀರು ಸಂಗ್ರಹವಾಗದೆ ಅಂತರ್ಜಲ ಮಟ್ಟ ಹೆಚ್ಚದೆ, ರೈತರಿಗೆ ಸರಿಯಾಗಿ ನೀರು ದೊರೆಯದೆ ಕೃಷಿ ಕಸುಬನ್ನು ಮಾಡಲು ತೊಂದರೆಯಾಗುತ್ತಿದ್ದುದರಿಂದ ಈ ಭಾಗದ ರೈತರು ಗ್ರಾಮ ಪಂಚಾಯತಿಯಲ್ಲಿ ಮನವಿ ಸಲ್ಲಿಸಿದರು. ಇದರಿಂದ ಎಚ್ಚೆತ್ತ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ಓಟದ ಮೀಟರ್ ಅಳತೆಗೆ ಕಡಿಮೆ ದರ ಹಾಗೂ ಬಹುಬಾಳಿಕೆ ಬರುವ ತಡೆಗೋಡೆಯನ್ನು ಯೋಜನೆಗಳ ಮಾರ್ಗಸೂಚಿಯ ಪ್ರಕಾರ ಕೂಲಿ ಮತ್ತು ಸಾಮಗ್ರಿಗಳ 60:40ರ ಅನುಪಾತದಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಬಳಸಿಕೊಂಡು ನಿರ್ಮಾಣ ಮಾಡಬಹುದು ಎಂದು ತಿಳಿದುಕೊಂಡರು. ಪಂಚಾಯಿತಿಯ ಅಧಿಕಾರಿಗಳು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಸ್ಥಳಕ್ಕೆ ಭೇಟಿ ನೀಡಿ ಜಾಗವನ್ನು ಪರಿಶೀಲಿಸಿ, ಇದಕ್ಕೆ ತಾಂತ್ರಿಕ ಅನುಮೋದನೆಯನ್ನು ಪಡೆದುಕೊಂಡು ಸರ್ಕಾರಕ್ಕೆ ಸಂಬಂಧಿಸಿದ ದೊಡ್ಡಾಲಹಳ್ಳಿ ಗ್ರಾಮದ ಮಾದೇಗೌಡ ಬೈರೇಗೌಡರರವರ ಜಮೀನಿನ ಹತ್ತಿರ ಸರ್ಕಾರಿ ಹಳ್ಳಕ್ಕೆ ಜಾಗವೊಂದನ್ನು ಆಯ್ಕೆ ಮಾಡಿ ಬಹು ಕಮಾನು ಚೆಕ್ ಡ್ಯಾಂ ನಿರ್ಮಾಣ ಮಾಡಿದರು.

ಇದರಿಂದಾಗಿ ಅನೇಕ ಅನುಕೂಲಗಳು ಉಂಟಾದವು. ಅವುಗಳೆಂದರೆ ಪ್ರತಿ ಓಟದ ಮೀಟರ್‌ಲ್ಲಿ ನಿರ್ಮಿಸಿದ ಚೆಕ್ ಡ್ಯಾಂನಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹಗೊಂಡು ಅಂತರ್ಜಲದ ಮಟ್ಟವು ಹೆಚ್ಚಾಗುತ್ತಿತ್ತು. ಈ ಕಾರಣದಿಂದಾಗಿ ರೈತರು ತಮ್ಮ ಜಮೀನುಗಳಲ್ಲಿ ಕೃಷಿ ಕಸುಬನ್ನು ಉತ್ತಮ ರೀತಿಯಲ್ಲಿ ಕೈಗೊಂಡು ಮತ್ತು ಕೊಳವೆ ಬಾವಿಗಳನ್ನು ಕೊರೆಸಿ, ಆರ್ಥಿಕವಾಗಿ ಮತ್ತು



ಭೌತಿಕವಾಗಿ ಉತ್ತಮ ರೀತಿಯಲ್ಲಿ ಸಾಧನೆಯನ್ನು ಮಾಡಿದ್ದಾರೆ.

ಈ ರೀತಿಯಾಗಿ ಒಂದು ಗ್ರಾಮ ಪಂಚಾಯತಿಯಲ್ಲಿ ನಿರ್ಮಾಣಗೊಂಡ ಬಹು ಕಮಾನು ಚೆಕ್ ಡ್ಯಾಂನಿಂದ ಸ್ಫೂರ್ತಿ ಪಡೆದು ಬೇರೆ ಬೇರೆ ಗ್ರಾಮ ಪಂಚಾಯತಿಗಳಲ್ಲಿಯೂ ಸಹ ಚೆಕ್ ಡ್ಯಾಂ ನಿರ್ಮಾಣ ಮಾಡಿಕೊಂಡು ಅನುಕೂಲತೆಯನ್ನು ಪಡೆದುಕೊಂಡಿರುತ್ತಾರೆ. ಇದರಿಂದಾಗಿ ಆ ಗ್ರಾಮಗಳಲ್ಲಿನ ಅಂತರ್‌ಜಲದ ಮಟ್ಟವು ಹೆಚ್ಚಾಗಿದೆ.



**ಅನುಕೂಲಗಳು:**

1. ಹಳ್ಳದ ಭಾಗವು ಆಳವಾಗಿರುವ ಹಾಗೂ ಕಡಿಮೆ ಉದ್ದವಿರುವ ಸ್ಥಳದಲ್ಲಿ ಹೆಚ್ಚು ಎತ್ತರಕ್ಕೆ ನಿರ್ಮಿಸಬಹುದು.
2. ಆರ್ಚ್ ಚೆಕ್ ಡ್ಯಾಂನ್ನು ಕಡಿಮೆ ಸಾಮಗ್ರಿ ಹಾಗೂ ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದು.

**ಬಹು ಕಮಾನು ಚೆಕ್ ಡ್ಯಾಂನಿಂದ ನೀರನ್ನು ಬಂಧಿಸುವ ವಿಧಾನದಿಂದಾಗುವ ಉಪಯೋಗಗಳು:**

1. ಆರ್ಚ್ ಚೆಕ್ ಡ್ಯಾಂನ ತಳಭಾಗದಲ್ಲಿನ ಕೊಳವೆಬಾವಿಗಳು ಮತ್ತು ಬಾವಿಗಳಲ್ಲಿನ ನೀರಿನ ಮಟ್ಟವು ಹೆಚ್ಚುತ್ತದೆ.
2. ಆರ್ಚ್ ಡ್ಯಾಂನಿಂದಾಗಿ ಅತೀವೃಷ್ಠಿಯಿಂದಾಗುವ ಹಾನಿಯನ್ನು ಸ್ವಲ್ಪ ಪ್ರಮಾಣದಲ್ಲಿ ತಡೆ ಗಟ್ಟಬಹುದು.
3. ಆರ್ಚ್ ಡ್ಯಾಂನ ಮೇಲ್ಭಾಗದಲ್ಲಿ ಅಲ್ಪ ಪ್ರಮಾಣದಲ್ಲಿ ಕೃಷಿಗಾಗಿ ಏತ ನೀರಾವರಿಯನ್ನು ಅಳವಡಿಸಿಕೊಳ್ಳಬಹುದು.

| ಕಾಮಗಾರಿ ವಿವರ | | |
|---|---|---|
| ಅಂದಾಜು ಮೊತ್ತ | : | 5.00 |
| ಕಾಮಗಾರಿಯ ಪ್ರಾರಂಭಿಕ ವರ್ಷ | : | 2015–16 |
| ಕಾಮಗಾರಿ ಪ್ರಾರಂಭ ದಿನಾಂಕ | : | 11.08.2015. |
| ಕಾಮಗಾರಿ ಮುಕ್ತಾಯ ದಿನಾಂಕ | : | 27.10.2015 |
| ಪಾವತಿಸಿದ ಕೂಲಿ ಮೊತ್ತ | : | 1.54ಲಕ್ಷ |
| ಸಾಮಗ್ರಿ ಮೊತ್ರ | : | 3.45ಲಕ್ಷ |
| ಮಾನವ ದಿನಗಳು | : | 756 |

4. ಡ್ಯಾಂನಿಂದಾಗಿ ದೀರ್ಘಕಾಲದವರೆಗೆ ನೀರನ್ನು ಬಂಧಿಸುವುದರಿಂದ ಜಾನುವಾರುಗಳಿಗೆ ಕುಡಿಯುವ ನೀರಿಗೆ ಕೊರತೆಯುಂಟಾಗುವುದಿಲ್ಲ.

ಯಶೋಗಾಥೆ

# ಯಶಸ್ವಿ ಜಲ ಮರು ಪೂರಣ ಘಟಕ ನಿರ್ಮಾಣ ಕಾಮಗಾರಿ



ಡಾ. ಎ. ಚನ್ನಪ್ಪ

ಬೇಸಿಗೆಯ ದಿನಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಉಂಟಾಗ ಬಾರದೆಂದು ಬತ್ತಿ ಹೋಗುತ್ತಿರುವ ಅಂತರ್ಜಲವನ್ನು ವೃದ್ಧಿಸುವ ನಿಟ್ಟಿನಲ್ಲಿ ಜಲ ಮರುಪೂರಣ ಕಾಮಗಾರಿಗಳಿಗೆ ಮೊದಲ ಆದ್ಯತೆ ನೀಡಲಾಯಿತು.

"ಮಳೆಯಿಲ್ಲದೆ ನೀರಿಲ್ಲ, ನೀರಿಲ್ಲದೆ ಜೀವನವಿಲ್ಲ" ಪಶು, ಪ್ರಾಣಿ, ಪಕ್ಷಿ, ಮನುಷ್ಯ ಹಾಗೂ ಪ್ರಕೃತಿಗೆ ನೀರಿನ ಅವಶ್ಯಕತೆಯಿದ್ದು, ಭೂಮಿಯ ಮೇಲೆ ಮೂರು ಪಟ್ಟು ನೀರಿದ್ದರೂ ಕುಡಿಯಲು ಯೋಗ್ಯವಾದ ನೀರು ಶೇಕಡ 20% ರಷ್ಟು ಮಾತ್ರ ಕಾರಣ ಕುಡಿಯುವ ನೀರಿನ ಕೆರೆಗಳ ಹೂಳೆತ್ತುವುದು, ಹೊಲಗಳಲ್ಲಿ ಬದುಗಳ ನಿರ್ಮಾಣ, ಇಂಗುಗುಂಡಿಗಳ ನಿರ್ಮಾಣ, ಮಣ್ಣಿನ ಆಣೆಕಟ್ಟುಗಳ ನಿರ್ಮಾಣ, ಚೆಕ್ ಡ್ಯಾಮ್‌ಗಳು ಹಾಗೂ ಕೃಷಿಹೊಂಡಗಳನ್ನು ನಿರ್ಮಿಸುವ ಮೂಲಕ ನಾವುಗಳು ಕುಡಿಯುವ ನೀರನ್ನು ಉಳಿಸುವ, ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಅತ್ಯಂತ ಮಹತ್ವದ ಕಾರ್ಯವಾಗಿದೆ.



ಕರ್ನಾಟಕ ರಾಜ್ಯದಲ್ಲಿ ಈ ವರ್ಷ ಮಳೆಯ ಪ್ರಮಾಣ ಕಡಿಮೆಯಾಗಿ ಬರಗಾಲದ ಛಾಯೇ ಆವರಿಸಿದೆ ಮುಂಬರುವ ಬೇಸಿಗೆಯ ಕಾಲದಲ್ಲಿ ಕುಡಿಯುವ ನೀರಿನ ಜಲಮೂಲಗಳಲ್ಲಿ ಒಂದಾದ ಅಂತರ್ ಜಲವು ಬತ್ತಿಹೋಗುವ ಆತಂಕದಲ್ಲಿದ್ದೇವೆ, ಬಳ್ಳಾರಿ ಜಿಲ್ಲೆಯ ಹಡಗಲಿ, ಹಗರಿಬೊಮ್ಮನಹಳ್ಳಿ ಹಾಗೂ ಕೂಡ್ಲಿಗಿ ತಾಲ್ಲೂಕುಗಳಲ್ಲಿ ಸುಮಾರು 500 ರಿಂದ 600 ಅಡಿಯವರೆಗೆ ಬೋರ್‌ವೆಲ್‌ಗಳನ್ನು ಕೊರೆದರೂ ನೀರು ಸಿಗಲಾರದಂತಹ ಪರಿಸ್ಥಿತಿ ಇದ್ದು, ಈ ತಾಲ್ಲೂಕುಗಳನ್ನು ಈಗಾಗಲೇ ಕೆಂಪು ಪಟ್ಟಿಗೆ ಸೇರಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಪಶ್ಚಿಮ ದಿಕ್ಕಿಗೆ ಹಡಗಲಿಯಿಂದ ಸಿರುಗುಪ್ಪ ತಾಲ್ಲೂಕಿನವರೆಗೆ ತುಂಗಭದ್ರಾ ನದಿ ಹರಿಯುತ್ತಿದೆ ಹಾಗಯೇ ಪೂರ್ವ ದಿಕ್ಕಿಗೆ ವೇದಾವತಿ (ಹಗರಿ) ನದಿ ಬಳ್ಳಾರಿಯಿಂದ ಸಿರುಗುಪ್ಪ ತಾಲ್ಲೂಕಿನವರೆಗೆ ಹರಿಯುತ್ತಿದೆ. ಇದಲ್ಲದೆ ಅನೇಕ ಕೆರೆಗಳು, ಹಳ್ಳಕೊಳ್ಳಗಳು ಹರಿಯುತ್ತಿದ್ದರೂ, ಅಂತರ್‌ಜಲದ ಮೇಲಿನ ಅವಲಂಬನೆ ಕಡಿಮೆಯಾಗಿಲ್ಲ.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ





ದೊರಕುವ ಅಂತರ್‌ಜಲವೂ ಕೂಡಾ ವಿಷಯುಕ್ತ ಫ್ಲೋರೈಡ್ ಅಂಶದಿಂದ ಕೂಡಿರುತ್ತದೆ.

ಈ ಹಿನ್ನಲೆಯಲ್ಲಿ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 21 ಅಂಶಗಳ ಕಾರ್ಯಕ್ರಮದಡಿ ಜಲ ಮರುಪೂರಣ ಘಟಕಗಳ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ಬಳ್ಳಾರಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವೈಯಕ್ತಿಕ ಆಸಕ್ತಿಯಿಂದ ಸಾಧ್ಯವಾಯಿತು. ಬಳ್ಳಾರಿ ಜಿಲ್ಲೆಯ ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಹಾಗೂ ಜಿಲ್ಲೆಯಲ್ಲಿ ಯಥೇಚ್ಛ ವಾಗಿರುವ ಫ್ಲೋರೈಡ್ ಅಂಶವನ್ನು ಗಮನಿಸಿ ಮುಂಬರುವ ಬೇಸಿಗೆಯ ದಿನಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಉಂಟಾಗಬಾರದೆಂದು ಬತ್ತಿ ಹೋಗುತ್ತಿರುವ ಅಂತರ್ಜಲವನ್ನು ವೃದ್ಧಿಸುವ ನಿಟ್ಟಿನಲ್ಲಿ ಜಲ ಮರುಪೂರಣ ಕಾಮಗಾರಿಗಳಿಗೆ ಮೊದಲ ಆದ್ಯತೆ ನೀಡಲಾಯಿತು. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡುವ ಕೊಳವೆ ಬಾವಿಗಳನ್ನು ಭೂ ವಿಜ್ಞಾನಿಗಳ ಮೂಲಕ ಸರ್ವೆ ಮಾಡಿಸಿ, ಜಲಮರುಪೂರಣಕ್ಕೆ ಯೋಗ್ಯವಾದ 1500 ಕೊಳವೆ ಬಾವಿಗಳನ್ನು ಆಯ್ಕೆಮಾಡಿಕೊಳ್ಳಲಾಯಿತು.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ, ಅಭಿಯಂತರರುಗಳಿಗೆ ಹಾಗೂ ತಾಂತ್ರಿಕ ಸಹಾಯಕರಿಗೆ ಜಿಲ್ಲಾ ಮಟ್ಟದಲ್ಲಿ ಎರಡು ದಿನ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಮಾಹಿತಿ ನೀಡಿ ಕೆಲಸ ನಿರ್ವಹಿಸುವಂತೆ ಪ್ರೇರೇಪಣೆ ನೀಡಲಾಯಿತು. ಈ ಕಾರ್ಯಕ್ಕೆ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಅಧಿಕಾರಿಗಳು ಹೆಚ್ಚಿನ ಆಸಕ್ತಿ ವಹಿಸಿ ಪಾಲ್ಗೊಂಡರು.

**ಗ್ರಾಮ ಪಂಚಾಯತಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಈ ರೀತಿ ಮಾಹಿತಿ ಅಭಿಯಾನ, ಪ್ರೇರಣಾ ಅಭಿಯಾನ ಹಾಗೂ ಕಾಮಗಾರಿ ಆದೇಶ ಅಭಿಯಾನಗಳ ಮೂಲಕ ಈ ಕೆಳಗಿನಂತೆ ಪ್ರಗತಿ ಸಾಧಿಸಲಾಯಿತು.**

| ಕ್ರ.ಸಂ | ತಾಲ್ಲೂಕು | ಗ್ರಾ.ಪಂ. ಗಳ ಸಂಖ್ಯೆ | ಅನುಮೋದನೆಯಾಗಿರುವ ಕಾಮಗಾರಿಗಳ ಸಂಖ್ಯೆ | ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ | ಮುಕ್ತಾಯಗೊಂಡಿರುವ ಕಾಮಗಾರಿಗಳ ಸಂಖ್ಯೆ | ವೆಚ್ಚವಾದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|---|
| 1 | ಬಳ್ಳಾರಿ | 39 | 216 | 79 | 58 | 23.78 |
| 2 | ಹಡಗಲಿ | 26 | 325 | 84 | 67 | 12.86 |
| 3 | ಹಗರಿಬೊಮ್ಮನಹಳ್ಳಿ | 23 | 164 | 70 | 67 | 36.85 |
| 4 | ಹೊಸಪೇಟೆ | 22 | 143 | 56 | 35 | 6.72 |
| 5 | ಕೂಡ್ಲಿಗಿ | 36 | 400 | 122 | 146 | 80.30 |
| 6 | ಸಂಡೂರು | 26 | 149 | 71 | 28 | 15.40 |
| 7 | ಸಿರುಗುಪ್ಪ | 27 | 103 | 46 | 2 | 1.10 |
| ಒಟ್ಟು | | **199** | **1500** | **528** | **403** | **177.014** |



ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಸರ್ಕಾರವು ಅಂದಾಜು ಪಟ್ಟಿಯಲ್ಲಿ ನಿಗದಿಪಡಿಸಿರುವ Construction of Rectangular Recharge Pit ಗಳನ್ನು ನಿರ್ಮಿಸಲಾಗುತ್ತಿದೆ. ಬೊರ್‌ವೆಲ್‌ನ ಸುತ್ತಲೂ 14 ಅಡಿ ಉದ್ದ, 11 ಅಡಿ ಅಗಲ, ಮತ್ತು 10 ಅಡಿ ಆಳದ ಗುಂಡಿಯನ್ನು ತೆಗದು, ಆ ಗುಂಡಿಯಲ್ಲಿ ಬೊರ್‌ವೆಲ್‌ನ ಕೇಸಿಂಗ್ ಪೈಪ್ ಭೂಮಿಯೊಳಗೆ ಕುಸಿಯದಂತೆ ಸಿಮೆಂಟ್ ಕಾಂಕ್ರೀಟ್‌ನ ಮೂಲಕ ಭದ್ರಗೊಳಿಸಿ, ತದನಂತರ ಬೋಡ್ರಸ್ ಕಲ್ಲು, 100mm ಕಲ್ಲು ಬಿಂಚೆ, 40mm ಕಲ್ಲು ಬಿಂಚೆ, 25 mm ಕಲ್ಲು ಬಿಂಚೆಗಳನ್ನು ಹಾಕಿ ಅದರ ಮೇಲೆ ಮಳೆ ನೀರನ್ನು ಸೋಸುವುದಕ್ಕಾಗಿ ನೈಲಾನ್ ಮೆಸ್‌ನ್ನು ಅಳವಡಿಸಲಾಗುತ್ತದೆ, ನಂತರ ಮರಳಿನ ಮೂಲಕ ಗುಂಡಿಯನ್ನು ತುಂಬಿಸಲಾಗುತ್ತದೆ. ಸುತ್ತಲೂ ಎತ್ತರದ ಗೋಡೆಯೊಂದನ್ನು ಕಟ್ಟಿರುವುದರಿಂದ ಮಳೆಯಿಂದ ಭೂಮಿಗೆ ಸುರಿದ ನೀರು ಇಳಿಜಾರಾಗಿರುವ ಈ ಇಂಗುಗುಂಡಿಗೆ ಸೇರುತ್ತದೆ. ತಾಂತ್ರಿಕವಾಗಿ 10 ಅಡಿ ಆಳಕ್ಕೆ ನೀರು ಹೋಗುವುದರಿಂದ ಸುತ್ತಲಿನ ಭೂಮಿಯು ನೀರನ್ನು ಇಂಗಿಕೊಳ್ಳುತ್ತದೆ ಇದರಿಂದ ಅಂತರ್‌ಜಲಮಟ್ಟ ಹೆಚ್ಚುವುದಲ್ಲದೆ ನೀರಿನಲ್ಲಿರುವ ಫ್ಲೋರೈಡ್ ಅಂಶ ಅಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ಈ ಕಾರ್ಯಕ್ಕೆ ಕೈಜೋಡಿಸಿದ ಹಾಗೂ ಕ್ರಿಯಾತ್ಮಕವಾಗಿ ಪಾಲ್ಗೊಂಡ ಎಲ್ಲಾ ಸಿಬ್ಬಂದಿ ವರ್ಗದವರ ಶ್ರಮ ಗ್ರಾಮೀಣ ಭಾಗದ ಜನರಿಗೆ ಒಳ್ಳೆಯ ಕುಡಿಯುವ ನೀರು ದೊರಕಲಿ ಎಂಬ ಸದಾಶಯದಿಂದ ಕೂಡಿದುದಾಗಿದೆ.

**ಒಂದು ಜಲ ಮರುಪೂರಣ ಘಟಕಕ್ಕೆ ಬೇಕಾಗುವ ಕೂಲಿ ಮತ್ತು ಸಾಮಾಗ್ರಿಗಳ ವಿವರ.**

| | | |
|---|---|---|
| ಅಂದಾಜು ಮೊತ್ತ | : | 55000 ರೂಗಳು |
| ಕೂಲಿ ಮೊತ್ತ | : | 19800 ರೂಗಳು (ಶೇಕಡ 36% ರಷ್ಟು) |
| ಸಾಮಗ್ರಿ ಮೊತ್ತ | : | 35200 ರೂಗಳು (ಶೇಕಡ 64% ರಷ್ಟು) |
| ಸೃಜನೆಯಾಗುವ ಮಾನವದಿನಗಳು | : | 97 (ದಿನ ಒಂದಕ್ಕೆ 204 ರೂಗಳಂತೆ) |

**ಬೇಕಾಗುವ ಸಾಮಗ್ರಿಗಳು**

1. ಬೋಡ್ರಸ್ (ಕಲ್ಲು) 5 ಟ್ರಿಪ್ (ಟ್ರಾಕ್ಟರ್)
2. ಕಲ್ಲು ಬಿಂಚೆ 100 ಮಿಲಿ ಮೀಟರ್ 4 ಟ್ರಿಪ್ (ಟ್ರಾಕ್ಟರ್)
3. ಕಲ್ಲು ಬಿಂಚೆ 40 ಮಿಲಿ ಮೀಟರ್ 2 ಟ್ರಿಪ್ (ಟ್ರಾಕ್ಟರ್)
4. ಕಲ್ಲು ಬಿಂಚೆ 25 ಮಿಲಿ ಮೀಟರ್ 2 ಟ್ರಿಪ್ (ಟ್ರಾಕ್ಟರ್)
5. ಉಸುಗು (ಮರಳು) 2 ಟ್ರಿಪ್ (ಟ್ರಾಕ್ಟರ್)
6. ಲೈಲಾನ್ ಮೆಸ್ (ಪದರೆ) 14.85 ಚದರ ಮೀಟರ್
7. ಬ್ರಿಕ್ಸ್ (ಸೈಜ್ ಕಲ್ಲು) 108



# Statement of ownership particulars about "KARNATAKA VIKAS"

FORM IV (See Rule 5)

| | | |
|---|---|---|
| 1. Place of Publication | : | Rural Development and Panchayath Raj Department, Bangalore – 560001. |
| 2. Periodicity of Publication | : | Monthly |
| 3. Printer's Name | : | Shanthilal |
| Nationality | : | Indian |
| Address | : | **KAVERI PRINTS INDIA**<br>No.79, 9th Cross, 5th Main, T.R.Mill Compound,Chamaraja Pete, Bengaluru-560018 |
| 4. Publisher's Name | : | K.Yalakki Gowda |
| Nationality | : | Indian |
| Address | : | Publisher and Director (Panchayath Raj)<br>No.309, 3rd Floor Gate No.1, Multistoreyed Building, Dr.Ambedkar Veedi, Bangalore 560001. |
| 5. Editor's Name | : | Y.Mahankalappa |
| Nationality | : | Indian |
| Address | : | Editor, Karnataka Vikas,<br>No.308, 3rd Floor, Gate No.1, Multistoreyed Building, Dr.Ambedkar Veedi, Bangalore 560001. |
| 6. Names and addresses of individuals who own the newspaper and partners or shareholders holding more than one percent of the total capital | : | Not Applicable. |

I K.Yalakki Gowda, hereby declare that the particulars given above are true to the best of my Knowledge and belief.

Bangalore
Date: 01.03.2016

Sd/-
**(K.Yalakki Gowda)**
Signature of the Publisher

# ಸಮಾಜದ ಗೌರವ ಕೇಂದ್ರಗಳ ಭವಿಷ್ಯವೇನು?

ಅಂಗನವಾಡಿ ಕೇಂದ್ರಗಳು ನಮ್ಮ ವ್ಯವಸ್ಥಿತ ಸಮಾಜದ ಒಂದು ಅಂಗವಾಗಿದೆ. ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಮ್ಮ ಮಕ್ಕಳ ಬಾಲವ್ಯಕ್ತಿತ್ವ ವಿಕಾಸಕ್ಕೆ ಕಾರಣೀಭುತರಾಗಿದ್ದಾರೆ. ಮಕ್ಕಳ ಬಾಲ್ಯಾವಸ್ಥೆಯಿಂದಲೇ ಮಾನಸಿಕವಾಗಿ ಹಾಗೂ ದೈಹಿಕವಾಗಿ ಉತ್ತೇಜಿಸಲು ಶ್ರಮಿಸುವ ಇವರಿಗೆ ಸರ್ಕಾರ ಗೌರವಿಸಿ ಸಹಾಯಧನ ನೀಡುತ್ತಿದೆ. ಅಲ್ಲದೆ ಪಲ್ಸ್ ಪೋಲಿಯೋ ಜಾತಿ / ಜನಗಣತಿ, ಸ್ತ್ರೀ ಶಕ್ತಿ ಸಂಘಗಳು, ಸಾಕ್ಷರತಾ ಆಂದೋಲನ, ಮಕ್ಕಳು ಮತ್ತು ಗರ್ಭಿಣಿ–ಬಾಣಂತಿಯರ ಆರೋಗ್ಯ ಮತ್ತು ಹಾರೈಕೆ ಹಾಗೂ ಹತ್ತಾರು ಜವಾಬ್ದಾರಿಗಳನ್ನು ಇವರು ನಿಭಾಯಿಸುತ್ತಾರೆ. ಹೆಣ್ಣುಮಕ್ಕಳು ಸಮಾಜದಲ್ಲಿ ಉತ್ತಮ ಸ್ಥಾನ ಮಾನ ಪಡೆಯುವಲ್ಲಿ ಈ ಕ್ಷೇತ್ರವು ಉತ್ತಮವಾಗಿದೆ. ಈ ಸಮಿತಿಗಳು ಸಮಾಜದಲ್ಲಿ ಒಂದು ಉತ್ತಮವಾದ ಕಾರ್ಯಗಳನ್ನು ನಿರ್ವಹಿಸುತ್ತಾ ಬರುತ್ತಿರುವುದರಿಂದ ಸರ್ಕಾರದ ಎಷ್ಟೋ ಕೆಲಸಗಳ ಹೊರೆ ಕಡಿಮೆಯಾಗಿದೆ.



## ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.

1. ನೌಕರರಿಗೆ ಸರ್ಕಾರದಲ್ಲಿ ಹೆಚ್ಚಿನ ಬಡ್ತಿಗಳ, ಭದ್ರತೆಗಳಲ್ಲಿ ಇದರ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಯೋಚನೆಯೇನು?
2. ನಮ್ಮ ಅಂಗನವಾಡಿ ಕೇಂದ್ರದಲ್ಲಿ ಪೌಷ್ಠಿಕ ಆಹಾರ ಪೂರೈಸುವಲ್ಲಿ ಗಣನೀಯ ಪ್ರಮಾಣವಾಗಿ ಇಳಿಮುಖವಾಗಿರುವುದೇಕೆ?
3. ಅಂಗನವಾಡಿ ಕೇಂದ್ರದ ಹಾಗೂ ನೌಕರರ ಬಗೆಗಿನ ಪ್ರಸ್ತಾಪವಾಗಲಿ, ಪ್ರಾಮುಖ್ಯತೆಯಾಗಲಿ ರಾಜ್ಯ ಹಾಗೂ ಕೇಂದ್ರ ಬಜೆಟ್‌ನಲ್ಲಿ ಇಲ್ಲದಿರುವುದರ ಉದ್ದೇಶವೇನು?
4. ಇಂತಹ ಉತ್ತಮ ಯೋಜನೆಗಳ ಭವಿಷ್ಯದ ಉದ್ದೇಶಗಳೇನು?

**ಎಂ. ಸಿದ್ದರಾಜು**
ಕೆರೆಕತ್ತಿಗನೂರು, ಬಿಲ್ಲಿನಕೋಟೆ ಪೋಸ್ಟ್,
ಸೋಂಪುರ ಹೋಬಳಿ, ನೆಲಮಂಗಲ ತಾಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

# ಸ್ವಚ್ಛ ಗ್ರಾಮ ಸುವರ್ಣ ಗ್ರಾಮ



ರಾಮಚಂದ್ರ ರೆಡ್ಡಿ

ನಾವು ಸ್ವಚ್ಛ ಆಗೋಣ
ಸ್ವಚ್ಛ ಗ್ರಾಮ ಮಾಡೋಣ
ಹಳ್ಳಿಗಳಿಗೆ ಹೋಗೋಣ
ಶೌಚಾಲಯವ ಕಟ್ಟೋಣ

ಜನ ಪ್ರತಿನಿಧಿಗಳ ಕರೆಯೋಣ,
ಅನುದಾನವನ್ನು ಪಡೆಯೋಣ
ಪಂಚಾಯತಿಗಳಿಗೆ ಹೋಗೋಣ
ಸೌಲಭ್ಯಗಳನ್ನು ಪಡೆಯೋಣ

ಕಂದಾಯವನ್ನು ಕಟ್ಟೋಣ
ಪಂಚಾಯತಿಗಳ ಬೆಳೆಸೋಣ
ಮತದಾನವನ್ನು ಮಾಡೋಣ
ಪ್ರಜಾಪ್ರಭುತ್ವ ಉಳಿಸೋಣ

ರಸ್ತೆ ರಿಪೇರಿ ಮಾಡಿಸೋಣ
ಸಾರಿಗೆ ಸಂಪರ್ಕ ಸಾಧಿಸೋಣ
ಶಾಲೆಗೆ ಮಕ್ಕಳ ಕಳಿಸೋಣ
ಶಿಕ್ಷಣವನ್ನು ಕೊಡಿಸೋಣ

ನಾವು ಸ್ವಚ್ಛ ಆಗೋಣ
ಸ್ವಚ್ಛ ಗ್ರಾಮ ಮಾಡೋಣ
ಗ್ರಾಮ ಸ್ವಚ್ಛ ಮಾಡೋಣ
ಸುವರ್ಣ ಗ್ರಾಮ ನೋಡೋಣ.

ಆಲೂರು ಗ್ರಾಮ ಪಂಚಾಯತಿ ಸದಸ್ಯರು, ಆರ್.ಸಿ ಇಂಟರ್‌ನ್ಯಾಷನಲ್ ಶಾಲೆ ಮಾಲೀಕರು
ತಮ್ಮೇನಹಳ್ಳಿ ಸರ್ಕಾರಿ ಶಾಲೆ ಹತ್ತಿರ, ಅಚ್ಯುತನಗರ ಪೋಸ್ಟ್, ಬೆಂಗಳೂರು 560107

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 27-02-2016 ರಲ್ಲಿದ್ದಂತೆ.

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2013-14 ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2014-15 ನೇ ಸಾಲಿನಲ್ಲಿ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2014-15 ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60 ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ. ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂಗಳು | ಒಟ್ಟಾರೆ ಶೇಕಡವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಉತ್ತರ ಕನ್ನಡ | 231 | 89 | 89 | 74 | 29 | 80 | 98 | 86 | 77 | 1 |
| ಬೆಂಗಳೂರು (ಗ್ರಾ) | 105 | 93 | 93 | 15 | 83 | 71 | 96 | 93 | 77 | 2 |
| ರಾಮನಗರ | 127 | 100 | 99 | 0 | 74 | 84 | 100 | 81 | 76 | 3 |
| ಕೋಲಾರ | 156 | 100 | 100 | 0 | 100 | 85 | 97 | 56 | 76 | 4 |
| ಉಡುಪಿ | 158 | 90 | 90 | 54 | 53 | 38 | 98 | 94 | 73 | 5 |
| ಚಿಕ್ಕಬಳ್ಳಾಪುರ | 157 | 96 | 96 | 3 | 87 | 80 | 96 | 54 | 73 | 6 |
| ಬಾಗಲಕೋಟೆ | 198 | 79 | 79 | 5 | 74 | 94 | 100 | 75 | 72 | 7 |
| ಮಂಡ್ಯ | 234 | 99 | 99 | 1 | 41 | 88 | 99 | 75 | 71 | 8 |
| ದಕ್ಷಿಣ ಕನ್ನಡ | 230 | 87 | 87 | 80 | 12 | 50 | 98 | 88 | 71 | 9 |
| ಶಿವಮೊಗ್ಗ | 271 | 95 | 95 | 21 | 42 | 83 | 98 | 49 | 69 | 10 |
| ಕೊಡಗು | 104 | 94 | 94 | 48 | 1 | 58 | 100 | 91 | 69 | 11 |
| ತುಮಕೂರು | 331 | 96 | 96 | 1 | 78 | 63 | 84 | 58 | 68 | 12 |
| ಮೈಸೂರು | 266 | 87 | 87 | 0 | 57 | 71 | 94 | 73 | 67 | 13 |
| ಚಾಮರಾಜನಗರ | 130 | 91 | 90 | 0 | 28 | 67 | 97 | 95 | 66 | 14 |
| ಧಾರವಾಡ | 144 | 88 | 88 | 4 | 54 | 92 | 97 | 40 | 66 | 15 |
| ಬೀದರ್ | 186 | 94 | 94 | 0 | 49 | 66 | 95 | 63 | 65 | 16 |
| ದಾವಣಗೆರೆ | 233 | 97 | 97 | 1 | 51 | 93 | 91 | 29 | 65 | 17 |
| ಚಿಕ್ಕಮಗಳೂರು | 227 | 99 | 99 | 22 | 19 | 42 | 94 | 70 | 63 | 18 |
| ಹಾವೇರಿ | 223 | 92 | 92 | 0 | 51 | 71 | 95 | 45 | 63 | 19 |
| ಬೆಂಗಳೂರು (ನ) | 96 | 84 | 84 | 31 | 50 | 15 | 97 | 78 | 62 | 20 |
| ಚಿತ್ರದುರ್ಗ | 189 | 97 | 97 | 0 | 58 | 73 | 96 | 19 | 62 | 21 |
| ಗದಗ | 122 | 86 | 86 | 0 | 54 | 82 | 94 | 31 | 61 | 22 |
| ಹಾಸನ | 267 | 96 | 96 | 7 | 25 | 41 | 96 | 63 | 60 | 23 |
| ವಿಜಯಪುರ | 213 | 90 | 90 | 0 | 48 | 49 | 95 | 26 | 56 | 24 |
| ಬೆಳಗಾವಿ | 502 | 93 | 93 | 0 | 17 | 55 | 82 | 31 | 53 | 25 |
| ಬಳ್ಳಾರಿ | 199 | 91 | 91 | 1 | 7 | 47 | 97 | 35 | 52 | 26 |
| ರಾಯಚೂರು | 180 | 88 | 88 | 1 | 36 | 40 | 75 | 31 | 51 | 27 |
| ಕೊಪ್ಪಳ | 153 | 84 | 84 | 0 | 19 | 43 | 96 | 25 | 50 | 28 |
| ಯಾದಗಿರಿ | 123 | 92 | 92 | 8 | 0 | 29 | 87 | 4 | 44 | 29 |
| ಕಲಬುರಗಿ | 264 | 83 | 80 | 0 | 17 | 42 | 82 | 1 | 43 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಫೆಬ್ರವರಿ 2016)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) | ವಿಳಂಬವಾಗಿ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ | ಅಂತಿಮವಾಗಿ ಪಡೆದ ಶ್ರೇಣಿ [ (ಅ) ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ) ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] |
|---|---|---|---|---|---|---|---|
| | A | B | C | D | E | F | G |
| ಚಿಕ್ಕಬಳ್ಳಾಪುರ | 19439 | 19536 | 0.4 | 5 | 1619 | 1 | 1 |
| ಬಾಗಲಕೋಟೆ | 16679 | 16638 | 0 | 1 | 926 | 4 | 2 |
| ಶಿವಮೊಗ್ಗ | 8719 | 8903 | 0 | 1 | 512 | 5 | 3 |
| ಕೋಲಾರ | 23891 | 23828 | 1.3 | 9 | 1592 | 2 | 4 |
| ಬೆಂಗಳೂರು (ಗ್ರಾ) | 12569 | 12711 | 1.5 | 12 | 1396 | 3 | 5 |
| ಉತ್ತರ ಕನ್ನಡ | 5849 | 5702 | 0 | 1 | 417 | 8 | 6 |
| ಉಡುಪಿ | 4306 | 4195 | 0.4 | 5 | 391 | 9 | 7 |
| ಚಿತ್ರದುರ್ಗ | 6911 | 6841 | 2.2 | 16 | 431 | 7 | 8 |
| ತುಮಕೂರು | 13331 | 13493 | 4.3 | 24 | 512 | 5 | 9 |
| ಮೈಸೂರು | 6871 | 7736 | 1.1 | 7 | 236 | 14 | 10 |
| ರಾಮನಗರ | 3421 | 3597 | 3.5 | 20 | 342 | 11 | 11 |
| ಚಿಕ್ಕಮಗಳೂರು | 4278 | 4266 | 4.2 | 23 | 388 | 10 | 12 |
| ಗದಗ | 2398 | 2440 | 2.3 | 17 | 239 | 13 | 13 |
| ದಕ್ಷಿಣ ಕನ್ನಡ | 2083 | 1996 | 0 | 1 | 104 | 20 | 14 |
| ವಿಜಯಪುರ | 5619 | 5679 | 5 | 25 | 267 | 12 | 15 |
| ಕೊಪ್ಪಳ | 2003 | 2183 | 2 | 14 | 154 | 17 | 16 |
| ಹಾವೇರಿ | 3391 | 3226 | 3.5 | 20 | 226 | 15 | 17 |
| ಚಾಮರಾಜನಗರ | 1446 | 1506 | 1.6 | 13 | 144 | 18 | 18 |
| ದಾವಣಗೆರೆ | 1412 | 1422 | 1.3 | 9 | 74 | 21 | 19 |
| ರಾಯಚೂರು | 2093 | 2024 | 2.4 | 18 | 110 | 19 | 20 |
| ಬೀದರ್ | 3241 | 3562 | 9.6 | 27 | 190 | 16 | 21 |
| ಬಳ್ಳಾರಿ | 1644 | 1744 | 1.4 | 11 | 65 | 24 | 22 |
| ಬೆಳಗಾವಿ | 1552 | 1548 | 1.2 | 8 | 33 | 27 | 23 |
| ಮಂಡ್ಯ | 1238 | 1381 | 2.6 | 19 | 68 | 23 | 24 |
| ಕೊಡಗು | 289 | 330 | 2.1 | 15 | 57 | 25 | 25 |
| ಹಾಸನ | 1209 | 1366 | 9.4 | 26 | 71 | 22 | 26 |
| ಧಾರವಾಡ | 511 | 447 | 3.8 | 22 | 28 | 28 | 27 |
| ಬೆಂಗಳೂರು (ನ) | 4003 | 3962 | 10.9 | 28 | 42 | 26 | 28 |
| ಕಲಬುರಗಿ | 289 | 335 | 39.4 | 30 | 11 | 29 | 29 |
| ಯಾದಗಿರಿ | 62 | 57 | 36.8 | 29 | 5 | 30 | 30 |

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೊಸ ಅನುಷ್ಠಾನ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯನ್ನಾಗಿ ಸೇರ್ಪಡೆ ಮಾಡುವ, ಹಾಲಿ ಇರುವ ಇಲಾಖೆಗಳನ್ನು ವಿಲೀನಗೊಳಿಸುವ ಮತ್ತು ಹಾಲಿ ಇರುವ ಇಲಾಖೆಯನ್ನು ಕೈಬಿಡಲು ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ** :

1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 186 ಉಖಾಯೋ 2012 ಬೆಂಗಳೂರು ದಿನಾಂಕ: 23–10–2013.
2. ದಿನಾಂಕ: 21–12–2015ರಂದು ಜರುಗಿದ ನರೇಗಾ ಯೋಜನೆಯೊಂದಿಗೆ PMGSY ಯೋಜನೆ ಯನ್ನು ಒಗ್ಗೂಡಿಸುವಿಕೆಯ ಸಭೆಯಲ್ಲಿ ಸರ್ಕಾರದಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಚರ್ಚಿಸಿದ ಪ್ರಕಾರ.
3. ಸರ್ಕಾರಿ ಆದೇಶ ಸಂಖ್ಯೆ:ಕೃಇ 166 ಕೃಪಸೇ 2011, ಬೆಂಗಳೂರು, ದಿನಾಂಕ: 08–07–2014.

~~~~~~

## ಪ್ರಸ್ತಾವನೆ:

ಓದಲಾದ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಒಂಭತ್ತು ಅನುಷ್ಠಾನ ಇಲಾಖೆಗಳಾದ, ಅರಣ್ಯ, ತೋಟಗಾರಿಕೆ, ಸಣ್ಣ ನೀರಾವರಿ, ಕೃಷಿ, ಜಲಾನಯನ ಅಭಿವೃದ್ಧಿ, ರೇಷ್ಮೆ, ಮೀನುಗಾರಿಕೆ, ಪಶು ಸಂಗೋಪನಾ ಮತ್ತು ಪಂಚಾಯತ್ ರಾಜ್ ಇಂಜನಿಯರಿಂಗ್ ಇವುಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಗುರುತಿಸಿ ಘೋಷಿಸಿ ಆದೇಶಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳು ನಿರ್ವಹಿಸುವ ರೀತಿಯಲ್ಲಿಯೇ, ಸದರಿ ಇಲಾಖೆಗಳು ಕೂಡ ನಿರ್ವಹಿಸುತ್ತಿವೆ. ಕಳೆದ ಎರಡು ವರ್ಷಗಳಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನ ಇಲಾಖೆಗಳ ಪ್ರಗತಿಯನ್ನು ಗಮನಿಸಿದಾಗ, ಪಶುಸಂಗೋಪನಾ ಇಲಾಖೆಯು ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿಲ್ಲ. ಪ್ರಗತಿಯಲ್ಲಿ ಪಶುಸಂಗೋಪನಾ ಇಲಾಖೆಯ ಕೊಡುಗೆ ಗಣನೀಯವಾಗಿರುವುದಿಲ್ಲ. ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರಿರುತ್ತಾರೆ ಮತ್ತು ಅಭಿಯಂತರರು ಇರುವುದಿಲ್ಲ. ನರೇಗಾ ಯೋಜನೆಯ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳದೇ ಇರುವುದರಿಂದ, ಸದರಿ ಇಲಾಖೆಯನ್ನು ನರೇಗಾ ಯೋಜನೆಯಿಂದ, ಕೈಬಿಡಲು ಗ್ರಾಮೀಣಾಭಿವೃದ್ಧಿ ಇಲಾಖೆಯು ಅಭಿಪ್ರಾಯಿಸಿರುತ್ತದೆ. ಉಲ್ಲೇಖ(3)ರ ಪ್ರಕಾರ ಜಲಾನಯನ ಇಲಾಖೆಯು ಕೃಷಿ ಇಲಾಖೆಗೆ ವಿಲೀನಗೊಂಡಿರುತ್ತದೆ. ಇನ್ನು ಮುಂದೆ, ಜಲಾನಯನ ಕಾಮಗಾರಿಗಳು ಮತ್ತು ಕೃಷಿ ಕಾಮಗಾರಿಗಳನ್ನು ಅನುಷ್ಠಾನಿಸುವಾಗ ಈ ಎರಡು ಇಲಾಖೆಗಳ ಕಾಮಗಾರಿಗಳನ್ನು ಕೃಷಿ ಇಲಾಖೆಯ ಕಾಮಗಾರಿಗಳೆಂದು ಪರಿಗಣಿಸಿ, ನರೇಗಾ ಯೋಜನೆಯಡಿ ಕೇವಲ, ಕೃಷಿ ಇಲಾಖೆಯನ್ನು ಮಾತ್ರ ಅನುಷ್ಠಾನ ಸಂಸ್ಥೆಯನ್ನಾಗಿ ಗುರುತಿಸಿ ಘೋಷಿಸಬಹುದಾಗಿರುತ್ತದೆ. ಜಲಾನಯನ ಇಲಾಖೆಯು ಕೃಷಿ ಇಲಾಖೆಗೆ ವಿಲೀನಗೊಂಡಿರುವುದರಿಂದ, ಈಗಾಗಲೇ ಘೋಷಿಸಲಾದ ಅನುಷ್ಠಾನ ಸಂಸ್ಥೆಯಾದ ಜಲಾನಯನ ಇಲಾಖೆಯನ್ನು ನರೇಗಾ ಯೋಜನೆಯಡಿ ಕೈಬಿಡಬಹುದಾಗಿರುತ್ತದೆ.

ಮುಂದುವರೆಸುತ್ತಾ, ಉಲ್ಲೇಖ(2)ರಂತೆ, ದಿನಾಂಕ: 21–12–2015ರಂದು PMGSY ಯೋಜನೆಯನ್ನು ನರೇಗಾ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನ ಮಾಡುವ ಸಂಬಂಧ ಜರುಗಿದ ಸಭೆಯಲ್ಲಿ ಸರ್ಕಾರದ ಪ್ರಧಾನ
~~~~~~

ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಇಲಾಖೆಯ ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಇವರನ್ನು ಸಹ ನರೇಗಾ ಯೋಜನೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಹಾಗೂ ಕಾಮಗಾರಿಗಳನ್ನು ನರೇಗಾ ಯೋಜನೆಯ ಅನುದಾನವನ್ನು ಬಳಸಿಕೊಂಡು ಅನುಷ್ಠಾನಿಸಲು ಸೂಚಿಸಿ, ಸದರಿ ಇಲಾಖೆಯನ್ನು ನರೇಗಾ ಯೋಜನೆಯಡಿ ಅನುಷ್ಠಾನ ಸಂಸ್ಥೆಯೆಂದು ಗುರುತಿಸಿ, ಆದೇಶಿಸಲು ಸೂಚಿಸಿರುತ್ತಾರೆ. ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆಯನ್ನು ಅನುಷ್ಠಾನ ಸಂಸ್ಥೆಯನ್ನಾಗಿ ಘೋಷಿಸುವ ಮೂಲಕ, ಅನುಷ್ಠಾನ ಸಂಸ್ಥೆಯು ಹಿಂದಿನ ಮತ್ತು ತರುವಾಯದ ಕಾಮಗಾರಿಗಳನ್ನು ಸದರಿ ಯೋಜನೆಯಡಿ ಅನುಷ್ಠಾನಗೊಳಿಸಲು ಅನುಕೂಲವಾಗುತ್ತದೆ. ಹಾಗೂ ನರೇಗಾ ಯೋಜನೆಯ ಒಟ್ಟಾರೆ ಪ್ರಗತಿಯನ್ನು ಹೆಚ್ಚಿಸಬಹುದಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಚರ್ಚಿಸಿ ತೀರ್ಮಾನಿಸಿದ ಹಿನ್ನೆಲೆಯಲ್ಲಿ ಸರ್ಕಾರವು ಆದೇಶವನ್ನು ಹೊರಡಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 247 ಉಖಾಯೋ 2014 ಬೆಂಗಳೂರು ದಿನಾಂಕ: 12–01–2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈ ಕೆಳಕಂಡ ವಿಷಯಗಳು ತಕ್ಷಣವೇ ಜಾರಿಗೆ ಬರುವಂತೆ ಆದೇಶಿಸಿದೆ.

1. ದಿನಾಂಕ: 23–10–2013ರಂದು ಹೊರಡಿಸಿರುವ ಆದೇಶದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನ ಸಂಸ್ಥೆಯನ್ನಾಗಿ ಘೋಷಿಸಲಾದ ಪಶು ಸಂಗೋಪನಾ ಇಲಾಖೆಯನ್ನು ಮುಂದಿನ ಆದೇಶ ಬರುವವರೆಗೂ ಹಿಂಪಡೆದು ಕೈಬಿಡಲಾಗಿದೆ.
2. ಜಲಾನಯನ ಇಲಾಖೆ ಕೃಷಿ ಇಲಾಖೆಗೆ ವಿಲೀನಗೊಂಡಿರುವುದರಿಂದ ಜಲಾನಯನ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯೆಂದು ನರೇಗಾ ಯೋಜನೆಯಡಿ ಘೋಷಿಸಿರುವುದನ್ನು ದಿನಾಂಕ: 23–10–2013ರ ಆದೇಶದಿಂದ ಹಿಂಪಡೆದು ಕೃಷಿ ಇಲಾಖೆಯಡಿ ಸೇರಿಸಲಾಗಿದೆ. ಈ ಸಂಬಂಧ ಕೃಷಿ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯೆಂದು ನರೇಗಾ ಯೋಜನೆಯಡಿ ಗುರುತಿಸಿ ಘೋಷಿಸಲಾಗಿದೆ. ಇನ್ನು ಮುಂದೆ ಜಲಾನಯನ ಕಾಮಗಾರಿ ಗಳನ್ನು ಕೃಷಿ ಇಲಾಖೆಯ ಕಾಮಗಾರಿಗಳೊಂದಿಗೆ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಲು ಆದೇಶಿಸಿದೆ.
3. ಈಗಾಗಲೇ ಅನುಷ್ಠಾನ ಸಂಸ್ಥೆಗಳೆಂದು (Implementing agencies) ಘೋಷಿಸಲಾದ ಅನುಷ್ಠಾನ ಇಲಾಖೆಗಳ ಜೊತೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಡಿ ಬರುವ ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆಯನ್ನು ನರೇಗಾ ಯೋಜನೆಯಡಿ ಅನುಷ್ಠಾನ ಸಂಸ್ಥೆಯನ್ನಾಗಿ ಘೋಷಿಸಲಾಗಿದೆ. ಸದರಿ ಸಂಸ್ಥೆಯ ಕಾಮಗಾರಿಗಳನ್ನು ನರೇಗಾ ಯೋಜನೆಯ ಮಾರ್ಗಸೂಚಿಗಳನ್ವಯ ಅನುಷ್ಠಾನ ಅಧಿಕಾರಿಗಳ ಮೂಲಕ ದಿನಾಂಕ: 23–10–2013ರ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 186 ಉಖಾಯೋ 2012, ಬೆಂಗಳೂರು ಇದರ ಆದೇಶದ ಪತ್ರದಲ್ಲಿ ವಿಧಿಸಿರುವ ನಿಯಮಗಳಿಗೆ ಮತ್ತು ಷರತ್ತುಗಳ ಅನುಪಾಲನೆಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿದ್ದೇಶ್ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸುತ್ತೋಲೆ

## ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–1.
ದೂ. 080–22372738 E-mail: nregs-ka@nic.in

ಸಂಖ್ಯೆ: ಗ್ರಾಅಪ 241 ಉಖಾಯೋ 2015

ದಿನಾಂಕ: 19–01–2016

## ಸುತ್ತೋಲೆ

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯೊಂದಿಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಒಗ್ಗೂಡಿಸುವಿಕೆ ಬಗ್ಗೆ .

ಉಲ್ಲೇಖ : 1. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಪತ್ರ ಸಂ:J-11060/1/2011-MGNREGA, ದಿನಾಂಕ: 07–11–2013.

2. ದಿನಾಂಕ:22–12–2015 ರಂದು ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ

3. ಸರ್ಕಾರದ ಆದೇಶ ಸಂ:ಗ್ರಾ. ಅ.ಪ: 247: ಉಖಾಯೋ: 2014: ಬೆಂಗಳೂರು, ದಿನಾಂಕ:12–01–2016

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ಉಲ್ಲೇಖ(1)ರ ಪತ್ರದಂತೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಮತ್ತು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಒಗ್ಗೂಡಿಸುವಿಕೆ ಕಾಮಗಾರಿಗಳನ್ನು ಈ ಕೆಳಗಿನ ಪದ್ಧತಿಗಳಾಗಿ ತೆಗೆದುಕೊಳ್ಳಬಹುದಾಗಿದೆ.

- Pre-PMGSY works to support PMGSY works.
- Post-PMGSY works for durability and value addition of the PMGSY works.
- MGNREGA farm net roads.
- PMGSY Roadside Plantation.

ಸದರಿ ವಿಷಯದ ಬಗ್ಗೆ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಭಾರತ ಸರ್ಕಾರ ರವರ ಒಗ್ಗೂಡಿಸುವಿಕೆ ಮಾರ್ಗಸೂಚಿ ಚಾಲನೆ ಮಾಡಲು ದಿನಾಂಕ:22.12.2015 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಸಭೆ ನೆಡೆಸಿ, ಸುಧೀರ್ಘವಾಗಿ ಪರಿಶೀಲಿಸಿ ಕೆಳಕಂಡಂತೆ ತೀರ್ಮಾನ ತೆಗೆದುಕೊಳ್ಳಲಾಗಿದ್ದು, ಅದರಂತೆ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸುವಂತೆ ಸೂಚಿಸಿದೆ.

1. Pre-PMGSY ತೆಗೆದುಕೊಳ್ಳಬಹುದಾದ ಕಾಮಗಾರಿಗಳಿಗೆ ಕೇಂದ್ರದ ಸುತ್ತೋಲೆ ಮತ್ತು ಮಾರ್ಗದರ್ಶನ ಹಾಗೂ ಸಾಮರ್ಥ್ಯ ತಾಂತ್ರಿಕ ಪುಸ್ತಕದಲ್ಲಿ ತಿಳಿಸಿರುವಂತೆ ಮಾದರಿ ಅಂದಾಜು ಪತ್ರಿಕೆಯನ್ನು ತಯಾರಿಸಿ ಸಲ್ಲಿಸುವುದು. ಈ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಕೆ.ಆರ್.ಆರ್.ಡಿ.ಎ ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು ರವರು ಕ್ರೋಢಿಕರಿಸಿ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ಸಲ್ಲಿಸುವುದು.

ಇಂತಹ ಕಾಮಗಾರಿಗಳಿಗೆ ವಿಶೇಷ ತಾಂತ್ರಿಕ ಜ್ಞಾನದ ಅವಶ್ಯಕತೆ ಇರುವುದರಿಂದ ಕೆ.ಆರ್.ಆರ್.ಡಿ.ಎ. ಯನ್ನು ಅನುಷ್ಠಾನ ಸಂಸ್ಥೆಯನ್ನಾಗಿ ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ ಘೋಷಿಸಲಾಗಿದ್ದು, ಮುಖ್ಯ ಕಾರ್ಯಾಚರಣೆ ಅಧಿಕಾರಿಗಳವರು ತಿಳಿಸುವ ಅನುಷ್ಠಾನ ಅಧಿಕಾರಿಗಳಿಗೆ ನರೇಗಾ ಸಾಫ್ಟ್ ಎಂ.ಐ.ಎಸ್. ನಲ್ಲಿ ಲಾಗಿನ್ ನೀಡುವುದು ಮತ್ತು ಡಿ.ಎಸ್.ಸಿ. ನೀಡುವುದು ಹಾಗೂ ಅವರಿಗೆ ನರೇಗಾ ತಾಂತ್ರಿಕ MIS ಬಳಸುವ ಬಗ್ಗೆ ತರಬೇತಿ ನೀಡುವುದು.

2. Post-PMGSY ಕಾಮಗಾರಿಗಳು ಪಿ.ಎಂ.ಜಿ.ಎಸ್.ವೈ. ರಸ್ತೆಗಳ ನಿರ್ವಹಣೆ ಗುತ್ತಿಗೆ ಅವಧಿ ಮುಕ್ತಾಯವಾದ ನಂತರ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಈ ರಸ್ತೆಗಳ ಬಾಳಿಕೆ ಹೆಚ್ಚಿಸಲು ಬೇಕಾಗಿರುವ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಪಿ.ಆರ್.ಇ.ಡಿ ಇಲಾಖೆಯು ತೆಗೆದುಕೊಳ್ಳುವುದು

3. ಪಿ.ಆರ್.ಇ.ಡಿ.ಗೆ ಹಸ್ತಾಂತರವಾಗಿರುವ ಪಿ.ಎಂ.ಜಿ.ಎಸ್.ವೈ ರಸ್ತೆಗಳ ಪಕ್ಕದಲ್ಲಿ ನೀರು ಸಂಗ್ರಹಣಾ ಕಾಮಗಾರಿಗಳನ್ನು ಅನುಷ್ಠಾಗೊಳಿಸುವುದು. ಇವುಗಳಿಂದ ರಸ್ತೆಗೆ ಹಾನಿಯಾಗದಂತೆ ಈ ಕಾಮಗಾರಿಗಳನ್ನು ತಾಂತ್ರಿಕವಾಗಿ ವಿನ್ಯಾಸಿಸಿಕೊಂಡು ನಿರ್ಮಿಸಲು ಸೂಚಿಸಲಾಗಿದ್ದು, ಇದಕ್ಕಾಗಿ ಪಿ.ಎಂ.ಜಿ.ಎಸ್.ವೈ ಮತ್ತು ಪಿ.ಆರ್.ಇ.ಡಿ ಇಂಜಿನಿಯರ್‌ಗಳು ಜಂಟಿಯಾಗಿ ಸರ್ವೆಮಾಡಿ ಸ್ಥಳಗಳನ್ನು ಅಂತಿಮಗೊಳಿಸಿ, ನರೇಗಾ ಯೋಜನೆಯಂತೆ ಪಿ.ಆರ್.ಇ.ಡಿ ವತಿಯಿಂದ ಅನುಷ್ಠಾನಗೊಳಿಸುವುದು.

4. ರಸ್ತೆಗೆ ಹೊಂದಿಕೊಂಡಿರುವ ಕೆಲವು ವಿಹಾರ ಧಾಮಗಳಲ್ಲಿ ಸಹ ನೀರು ಸಂಗ್ರಹಣೆ, ಗಿಡ ನೆಡುವಿಕೆ ಇತ್ಯಾದಿ ಕೆಲಸಗಳನ್ನು ಮಾಡಿ, ತಂಗುದಾಣಗಳನ್ನಾಗಿ ಮಾಡಲು ಕ್ರಮವಹಿಸುವುದು.

5. ಪಿ.ಎಂ.ಜಿ.ಎಸ್.ವೈ ರಸ್ತೆ ಬದಿಯಲ್ಲಿ ಗಿಡ ನೆಡುವಿಕೆ ಕಾಮಗಾರಿಗಳನ್ನು ಕೇವಲ ನರೇಗಾದಲ್ಲಿ ಮಾತ್ರ ತೆಗೆದುಕೊಳ್ಳತಕ್ಕದ್ದು. ಬೇರೆ ಯಾವುದೇ ಯೋಜನೆಯಲ್ಲಿ ಖರ್ಚು ಭರಿಸಬಾರದು ಮತ್ತು ಈ ನೆಡುತೋಪುಗಳ ಉತ್ತಮ ನಿರ್ವಹಣೆಗಾಗಿ ಕಾವಲುಗಾರರನ್ನು ಅರೆಕುಶಲ ಕಾರ್ಮಿಕರನ್ನಾಗಿ ಸಾಮಗ್ರಿ ವೆಚ್ಚದಲ್ಲಿ ಭರಿಸಬಹುದು.

6. ಫಾರಂ ನೆಟ್‌ವರ್ಕ್ ಕುರಿತಂತೆ, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು ಪಿ.ಎಂ.ಜಿ.ಎಸ್.ವೈ ರಸ್ತೆಯ ಕೂಡು ರಸ್ತೆಗಳಿಗೆ ಆದ್ಯತೆ ನೀಡುವಂತೆ ಮತ್ತು ಪಿ.ಎಂ.ಜಿ.ಎಸ್.ವೈ ಅಧಿಕಾರಿಗಳು ತಮ್ಮ ತಮ್ಮ ಕ್ಷೇತ್ರ ಮಟ್ಟದಲ್ಲಿ ಈ ಕಾಮಗಾರಿಗಳನ್ನು ಗುರುತಿಸಿ, ಪಟ್ಟಿಯನ್ನು ಆಯಾ ಜಿಲ್ಲೆಗಳ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಕ್ರೋಢೀಕೃತ ಮಾಹಿತಿಯನ್ನು ತಾಲ್ಲೂಕುವಾರು, ಜಿಲ್ಲಾವಾರು ಸಿದ್ದಪಡಿಸಿ, ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು ಪಿ.ಎಂ.ಜಿ.ಎಸ್.ವೈ ರವರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ಸಲ್ಲಿಸುವಂತೆ ಸೂಚಿಸುವುದು.

(ಮುನೀಷ್ ಮೌದ್ಗಿಲ್)
ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸುತ್ತೋಲೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 03-02-2016

ನಂ.ಗ್ರಾಅಪ/61 /ಗ್ರಾಪಂಅ/2016

# ಸುತ್ತೋಲೆ

**ವಿಷಯ** : ಕರ್ನಾಟಕ ಜ್ಞಾನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ** : ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ: ಇಡಿ 557 ಯುಆರ್‌ಸಿ 2013 ದಿನಾಂಕ:04-01-2016 ಹಾಗೂ 18-01-2016.

**********

ಕರ್ನಾಟಕವನ್ನು ಸ್ಪಂದನಾಶೀಲ ಜ್ಞಾನಾಧರಿತ ಸಮಾಜವನ್ನಾಗಿ ಪರಿವರ್ತಿಸುವ ಉದ್ದೇಶದಿಂದ ಸೂಕ್ತ ಶಿಫಾರಸ್ಸುಗಳನ್ನು ನೀಡಲು ಕರ್ನಾಟಕ ಸರ್ಕಾರ ಕರ್ನಾಟಕ ಜ್ಞಾನ ಆಯೋಗವನ್ನು ಡಾ: ಕೆ. ಕಸ್ತೂರಿ ರಂಗನ್‌ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. ಈ ಆಯೋಗವು ಜ್ಞಾನಾಧರಿತ ಸಮಾಜವನ್ನು ಮಾನವನ ಅಭ್ಯುದಯದ ವಿಷಯವನ್ನು ಕೇಂದ್ರವನ್ನಾಗಿರಿಸಿಕೊಂಡು ಜನಸಾಮಾನ್ಯರನ್ನು ಕ್ರಿಯಾಶೀಲಗೊಳಿಸಲು ಮತ್ತು ತಳಮಟ್ಟದಲ್ಲಿ ಸಮುದಾಯದ ಮಾಹಿತಿಯನ್ನು ವಿತರಿಸಲು ಹಲವಾರು ಶಿಫಾರಸ್ಸುಗಳನ್ನು ಮಾಡಿರುತ್ತದೆ. ಈ ಶಿಫಾರಸ್ಸುಗಳನ್ನು ರಾಜ್ಯದ ವಿವಿಧ ಇಲಾಖೆಗಳು ಅನುಷ್ಠಾನಗೊಳಿಸಬೇಕಾಗಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯು ಈ ಕೆಳಕಂಡ ಶಿಫಾರಸ್ಸನ್ನು ಅನುಷ್ಠಾನಗೊಳಿಸಬೇಕಾಗಿದೆ.

**“83 ರಾಜ್ಯದ ಕೃಷಿಕರು, ಮಹಿಳೆಯರು, ಮಕ್ಕಳು, ಹಿರಿಯ ಪ್ರಜೆಗಳು ಹಾಗೂ ಇತರೆ ವರ್ಗಗಳ ಸಬಲೀಕರಣಕ್ಕೆ ರಾಜ್ಯ ಸಮುದಾಯ ಜ್ಞಾನ ಕೇಂದ್ರಗಳನ್ನು (ಖಎಖ) ತಳ ಹಂತದಲ್ಲಿ ಆರಂಭಿಸಿ, ಸೂಕ್ತ ಮಾಹಿತಿ ಮತ್ತು ಮೌಲ್ಯಯುತ ಜ್ಞಾನವನ್ನು ಒದಗಿಸಬೇಕು. ಪ್ರಸ್ತುತ ಈ ಮಾಹಿತಿ ನೀಡುವ ಕಾರ್ಯವನ್ನು ರೈತ ಸಂಪರ್ಕ ಕೇಂದ್ರಗಳು, ಸಾರ್ವಜನಿಕ ಗ್ರಂಥಾಲಯಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ಅಂಗನವಾಡಿ ಕೇಂದ್ರಗಳು ನಿರ್ವಹಿಸುತ್ತಿವೆ. ಇವೆಲ್ಲವನ್ನೂ ಸಂಯುಕ್ತಗೊಳಿಸುವ ಮೂಲಕ ಸಾರ್ವಜನಿರಿಗೆ ಸಮುದಾಯ ಜ್ಞಾನ ಕೇಂದ್ರಗಳ ಮುಖೇನ ಸಮಗ್ರ ವಿಧಾನದಲ್ಲಿ ಮಾಹಿತಿ ಒದಗಿಸಬಹುದು.”**

ಗ್ರಾಮೀಣ ಪ್ರದೇಶದ ಸಮುದಾಯವು ದೈನಂದಿನ ಬದುಕನಲ್ಲಿ ಅಗತ್ಯವಾಗಿ ಹೊಂದಿರಬೇಕಾದಂತಹ ಮಾಹಿತಿ / ಜ್ಞಾನವನ್ನು ಸರ್ವರಿಗೂ ಒದಗಿಸಬೇಕಾಗಿರುವುದು ಈಗಿನ ಅನಿವಾರ್ಯತೆಗಳಲ್ಲಿ ಒಂದಾಗಿರುತ್ತದೆ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಕೃಷಿ ಕೇಂದ್ರ, ರೈತ ಸಂಪರ್ಕ ಕೇಂದ್ರ ಹಾಗೂ ಗ್ರಾಮೀಣ ಸಾರ್ವಜನಿಕ ಗ್ರಂಥಾಲಯಗಳು ಈ ನಿಟ್ಟಿನಲ್ಲಿ ನಿರೀಕ್ಷಿತ ಕಾರ್ಯವನ್ನು ನಿರ್ವಹಿಸುತ್ತಿಲ್ಲದಿರುವುದನ್ನು ಗಮನಿಸಲಾಗಿದೆ. ರೈತರ ಹಿತಾಸಕ್ತಿಯನ್ನು ರಕ್ಷಿಸುವಂತಹ ಹಾಗೂ ಅವರಲ್ಲಿ ಆತ್ಮಸ್ಥೈರ್ಯ ತುಂಬಲು ಅನುವಾಗುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಮಾಹಿತಿಯನ್ನು, ಕೃಷಿ ಕ್ಷೇತ್ರವನ್ನು ಲಾಭದಾಯಕವನ್ನಾಗಿ ಮಾಡುವ ವಿವಿಧ ಹೊಸ ಆವಿಷ್ಕಾರಗಳ ಬಗ್ಗೆ ಗ್ರಾಮೀಣ ಸಮುದಾಯಕ್ಕೆ ಮಾಹಿತಿಯನ್ನು ನೀಡಲು, ಹಿಂದುಳಿದ ಹಾಗೂ ನಿಮ್ನ ವರ್ಗದ ಜನರಲ್ಲಿ, ಸಮಾಜದ ಗೌರವಕ್ಕೆ ಕುಂದು ತರುವಂತಹ ಆಚರಣೆಗಳನ್ನು ನಿಯಂತ್ರಿಸಲು ಸೂಕ್ತ ಮಾರ್ಗದರ್ಶನ ನೀಡುವ, ಸಮಾಜದ ದುರ್ಬಲ ವರ್ಗ, ಮಹಿಳೆ ಮತ್ತು ಮಕ್ಕಳು, ಹಿರಿಯ ನಾಗರೀಕರುಗಳಿಗೆ ಇರುವ ವಿವಿಧ ಯೋಜನಾ ಸೌಲಭ್ಯಗಳ ಬಗ್ಗೆ ಸಮಾಜದ ಎಲ್ಲಾ

ವರ್ಗದವರಿಗೂ ಮಾಹಿತಿಯನ್ನು ನೀಡಲು ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಂದು ಸಮುದಾಯ ಜ್ಞಾನ ಕೇಂದ್ರವನ್ನು ತೆರೆಯುವಂತೆ ಸೂಚಿಸಲಾಗಿದೆ. ಇದಕ್ಕಾಗಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತಿ ಗ್ರಂಥಾಲಯ ಅಥವಾ ರೈತ ಸಂಪರ್ಕ ಕೇಂದ್ರಗಳನ್ನು ಸಮುದಾಯ ಜ್ಞಾನ ಕೇಂದ್ರಗಳನ್ನಾಗಿ ಗುರುತಿಸುವಂತೆ ಸೂಚಿಸಲಾಗಿದೆ.

ತಾಲ್ಲೂಕು ಹಂತದ ವಿವಿಧ ಅಭಿವೃದ್ಧಿ ಇಲಾಖೆಗಳಿಂದ ಮಾಹಿತಿಯನ್ನು ಪಡೆದು ಗ್ರಾಮ ಪಂಚಾಯತಿಯ ಗಣಕಯಂತ್ರದಲ್ಲಿ ರೂಪಿಸಿಕೊಳ್ಳಲು ಸೂಚಿಸಲಾಗಿದೆ. ಈ ಮಾಹಿತಿಯ ಮುದ್ರಿತ ಪ್ರತಿಗಳನ್ನು ರೈತ ಸಂಪರ್ಕ ಕೇಂದ್ರ, ಪಶು ಚಿಕಿತ್ಸಾಲಯ ಕೇಂದ್ರಗಳು, ಸಾರ್ವಜನಿಕ ಗ್ರಂಥಾಲಯದ ಸೂಚನಾ ಫಲಕಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸುವಂತೆ ತಿಳಿಸಲಾಗಿದೆ. ವಿವಿಧ ಅಭಿವೃದ್ಧಿ ಇಲಾಖೆಗಳ ಸಂಬಂಧಿಸಿದ ಅಧಿಕಾರಿ / ನೌಕರರಿಂದ ಇಲಾಖಾ ಮಾಹಿತಿಗಳನ್ನು ಪಡೆದುಕೊಳ್ಳಲು ಕ್ರಮ ವಹಿಸುವಂತೆ ಸೂಚಿಸಿದೆ.

ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಮಟ್ಟದ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು ಅವರುಗಳ ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ತಾಲ್ಲೂಕು ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಒದಗಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಸೂಚಿಸಿದೆ.

ಸಾಮಾನ್ಯ ಜ್ಞಾನ ಮಾಹಿತಿ ಕೇಂದ್ರವನ್ನು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಇವರಿಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಹಾಗೂ ಇತರೆ ಸಿಬ್ಬಂದಿಯವರು ಸಹಕರಿಸಲು ಸೂಚಿಸಿದೆ.

**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು(ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಅಗತ್ಯವಾಗಿ ಗದಗದ ಸಮೀಪದಲ್ಲಿ ಗುರುತಿಸಲಾಗಿರುವ ಒಟ್ಟು 353 ಎಕರೆ 12 ಗುಂಟೆ ಜಮೀನನ್ನು ಖರೀದಿಸಲು/ಸ್ವಾಧೀನಪಡಿಸಿಕೊಳ್ಳಲು ಎರಡನೇ ಕಂತಿನಲ್ಲಿ ಅಗತ್ಯ ಅನುದಾನ ಬಿಡುಗಡೆಗೊಳಿಸುವ ಕುರಿತು.

ಓದಲಾಗಿದೆ : (1) ಸಮ ಸಂಖ್ಯೆಯ ಸರ್ಕಾರದ ಆದೇಶ, ದಿನಾಂಕ: 18–11–2015

(2) ಸಮ ಸಂಖ್ಯೆಯ ಸರ್ಕಾರದ ಆದೇಶ, ದಿನಾಂಕ: 13–01–2016

## ಪ್ರಸ್ತಾವನೆ:

ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಅಗತ್ಯವಾಗಿ ಗದಗ ಸಮೀಪದಲ್ಲಿ ಗುರುತಿಸಲಾಗಿರುವ ಒಟ್ಟು 353 ಎಕರೆ 12 ಗುಂಟೆ ಜಮೀನನ್ನು ಒಂದೇ ಹಂತದಲ್ಲಿ ಖರೀದಿಸಲು/ಸ್ವಾಧೀನಪಡಿಸಿಕೊಳ್ಳಲು ಓದಲಾದ (1)ರ ಸರ್ಕಾರದ ಆದೇಶದ ಮೂಲಕ ಜಿಲ್ಲಾಧಿಕಾರಿ, ಗದಗ ಜಿಲ್ಲೆ ಇವರಿಗೆ ಅನುಮತಿಸಿ ಆದೇಶಿಸಲಾಗಿದೆ. ಒಟ್ಟು 353 ಎಕರೆ 12 ಗುಂಟೆ ಜಮೀನನ್ನು ಒಂದೇ ಹಂತದಲ್ಲಿ ಖರೀದಿಸಲು/ಸ್ವಾಧೀನಪಡಿಸಿಕೊಳ್ಳಲು ಒಟ್ಟು ರೂ.29.69 ಕೋಟಿಗಳ ಮೊತ್ತದ ಅಗತ್ಯವಿದ್ದು ಮೊದಲ ಕಂತಿನಲ್ಲಿ ಓದಲಾದ (2)ರ ಸರ್ಕಾರದ ಆದೇಶದ ಮೂಲಕ ರೂ.6.00 ಕೋಟಿಗಳನ್ನು ಜಿಲ್ಲಾಧಿಕಾರಿ, ಗದಗ ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಲಾಗಿದೆ. ಬಾಕಿ ಮೊತ್ತ ರೂ.23.69 ಕೋಟಿಗಳ ಪೈಕಿ ಎರಡನೇ ಕಂತಿನಲ್ಲಿ ರೂ.16.17 ಕೋಟಿಗಳ ಮೊತ್ತವನ್ನು ಬಿಡುಗಡೆಗೊಳಿಸಲು ಯೋಜಿಸಲಾಗಿದೆ. ರೂ.16.17 ಕೋಟಿಗಳ ಮೊತ್ತವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳಾದ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯಡಿ ರಾಜ್ಯಕ್ಕೆ ನೀಡಿರುವ ಪ್ರಶಸ್ತಿ ಮೊತ್ತ, ಪಂಚಾಯತಿ ಸಶಕ್ತೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹಕ ಯೋಜನೆ ಮತ್ತು 2009ನೇ ಸಾಲಿನಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿಗಾಗಿ ಸಂಗ್ರಹಿಸಲಾದ ಶುಲ್ಕದಡಿ ಉಳಿತಾಯವಾಗಿರುವ ಮೊತ್ತ ಮತ್ತು ಆಕರಣೆಯಾಗಿರುವ ಬಡ್ಡಿ ಮೊತ್ತಗಳಿಂದ ಗುರುತಿಸಲಾಗಿದೆ. ರೂ. 16.17 ಕೋಟಿಗಳ ಮೊತ್ತವನ್ನು ಜಿಲ್ಲಾಧಿಕಾರಿ, ಗದಗ ಜಿಲ್ಲೆ ಇವರಿಗೆ ಬಿಡುಗಡೆಗೊಳಿಸುವ ಸಂಬಂಧ ಸರ್ಕಾರದ ಆದೇಶವನ್ನು ಹೊರಡಿಸುವ ಅಗತ್ಯವಿರುತ್ತದೆ. ಅದಕ್ಕಾಗಿ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 44 ಜಿಪಸ 2015 (ಪಿ–2), ಬೆಂಗಳೂರು, ದಿನಾಂಕ: 20–02–2016**

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ಉದ್ದೇಶಿತ "ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ" ಸ್ಥಾಪನೆಗೆ ಅಗತ್ಯವಾಗಿ ಗದಗದ ಸಮೀಪದಲ್ಲಿ ಗುರುತಿಸಿರುವ ಒಟ್ಟು 353 ಎಕರೆ 12 ಗುಂಟೆ ಜಮೀನನ್ನು ಒಂದೇ ಹಂತದಲ್ಲಿ ನಿಯಮಾನುಸಾರ ಖರೀದಿಸಲು/ಸ್ವಾಧೀನಪಡಿಸಿಕೊಳ್ಳಲು ಎರಡನೇ ಕಂತಿನಲ್ಲಿ **ರೂ. 16,17,00,000–00 (ಹದಿನಾರು ಕೋಟಿ ಹದಿನೇಳು ಲಕ್ಷ ರೂಪಾಯಿಗಳು ಮಾತ್ರ)ಗಳ ಮೊತ್ತವನ್ನು ಜಿಲ್ಲಾಧಿಕಾರಿ, ಗದಗ ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.**

**ರೂ.16,17,00,000–00** (ಹದಿನಾರು ಕೋಟಿ ಹದಿನೇಳು ಲಕ್ಷ ರೂಪಾಯಿಗಳು ಮಾತ್ರ)ಗಳ ಮೊತ್ತವನ್ನು ಈ ಕೆಳಗಿನ ಯೋಜನೆ/ಬಾಬ್ತುಗಳಲ್ಲಿ ಉಳಿತಾಯವಾಗಿರುವ ಮೊತ್ತ ಮತ್ತು ಆಕರಣೆಯಾಗಿರುವ ಬಡ್ಡಿ ಮೊತ್ತಗಳಿಂದ ವೆಚ್ಚ ಭರಿಸುವುದು.

| ಕ್ರ.ಸಂ | ಯೋಜನೆ/ಬಾಬ್ತು | ಬಿಡುಗಡೆ – ಗೊಳಿಸುತ್ತಿರುವ ಮೊತ್ತ (ರೂ.ಗಳಲ್ಲಿ) | ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ | ಬ್ಯಾಂಕ್ ಹೆಸರು ಮತ್ತು ಶಾಖೆ |
|---|---|---|---|---|
| 1. | ರಾಜೀವ್ ಗಾಂಧಿ ಪಂ ಚಾಯತಿ ಸಶಕ್ತೀಕರಣ ಅಭಿಯಾನ (ಆರ್.ಜಿ.ಪಿ.ಎಸ್.ಎ) ಯೋಜನೆಯಡಿ ರಾಜ್ಯಕ್ಕೆ ನೀಡಿರುವ ಪ್ರಶಸ್ತಿ ಮೊತ್ತ ಮತ್ತು ಆಕರಣೆಯಾಗಿರುವ ಬಡ್ಡಿ. | 5,52,55,000–00 | 052110026480 | ದೇನಾ ಬ್ಯಾಂಕ್, ಇಂದಿರಾ ನಗರ ಶಾಖೆ, ಬೆಂಗಳೂರು. |
| 2. | ಪಂಚಾಯತಿ ಸಶಕ್ತೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹಕ ಯೋಜನೆ (ಪಿ.ಇ.ಎ.ಐ.ಎಸ್) ಅಡಿ ರಾಜ್ಯಕ್ಕೆ ನೀಡಿರುವ ಪ್ರಶಸ್ತಿ ಮೊತ್ತದ ಪೈಕಿ ಪ್ರಸ್ತುತ ಲಭ್ಯವಿರುವ ಮೊತ್ತ ಮತ್ತು ಆಕರಣೆಯಾಗಿರುವ ಬಡ್ಡಿ ಮೊತ್ತ | 3,76,00,000–00 | 04462010089603 | ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಶಾಖೆ, ಬೆಂಗಳೂರು. |
| 3. | ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿಗಾಗಿ 2009ರಲ್ಲಿ ಸಂಗ್ರಹಿಸಿದ ಶುಲ್ಕದ ಮೊತ್ತ | 6,88,45,000–00 | 64191058240 | ವಿಧಾನ ಸೌಧ ಶಾಖೆ, ಬೆಂಗಳೂರು. |
| | **ಒಟ್ಟು ರೂ.** | **16,17,00,000–00** | | |

**ರೂ. 16,17,00,000–00** (ಹದಿನಾರು ಕೋಟಿ ಹದಿನೇಳು ಲಕ್ಷ ರೂಪಾಯಿಗಳು ಮಾತ್ರ)ಗಳ ಮೊತ್ತವನ್ನು **ಜಿಲ್ಲಾಧಿಕಾರಿ, ಗದಗ ಜಿಲ್ಲೆ ಇವರ ಕಛೇರಿಯ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ: 35564774155, ಭಾರತೀಯ ಸ್ಟೇಟ್ ಬ್ಯಾಂಕ್, ಗೌರ್ನಮೆಂಟ್ ಎಸ್ಟೇಟ್ ಶಾಖೆ, ಗದಗ (ಐ.ಎಫ್.ಎಸ್.ಸಿ ಕೋಡ್:SBIN0011270)**ಗೆ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ವಿಧಾನದ ಮೂಲಕ ವರ್ಗಾಯಿಸಲು ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ಅಧಿಕಾರವನ್ನು ಪ್ರದತ್ತಗೊಳಿಸಲಾಗಿದೆ.

ಬಾಕಿ ರೂ.7,52,00,000–00ಗಳ (ಏಳು ಕೋಟಿ ಐವತ್ತೆರಡು ಲಕ್ಷ ರೂಪಾಯಿಗಳು ಮಾತ್ರ) ಮೊತ್ತವನ್ನು ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿ, ಗದಗ ಜಿಲ್ಲೆ ಇವರಿಗೆ ಒದಗಿಸಲು ಕ್ರಮವಹಿಸಲಾಗುವುದು.

ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಅನುದಾನವನ್ನು ಅನ್ಯ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ: ಆಇ 220 ವೆಚ್ಚ–6/2015, ದಿನಾಂಕ:06–02–2016 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಬಿ.ಥೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ದಿನಾಂಕ 22-2-2016ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ವಿಧಾನ ಸೌಧದಲ್ಲಿ ಗ್ರಾಮೀಣ ಕುಡಿಯುವ ನೀರು ಅನುಷ್ಠಾನ ಕುರಿತು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.







ದಿನಾಂಕ 22-2-2016ರಂದು ವಿಧಾನಸೌಧದ ಸಭಾಂಗಣದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಗ್ರಾಮೀಣ ಕುಡಿಯುವ ನೀರು ಅನುಷ್ಠಾನದ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿದರು.

# KARNATAKA VIKAS : MARCH 2016

A Monthly Magazine for Rural Development and Panchayath Raj Department, Government of Karnataka

Regd. KA / BGGPO / 2531 / 2015-17, License to Post “without Prepayment” WPP - 32

RNI No. : 28103 / 1974 Total No. Pages 52, Posted at Bengaluru PSO, Mysore Road, Bengaluru on 9th, 10th, 11th of Every Month











Name of the Editor
**Y. Mahankalappa**

Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00